ಕೊರವಂಜಿ



ಮೇ
೧೯೬೪

KURAVANJI
Kannada Monthly

ಸಂಪಾದಕರು :
ಶ್ರೀ ರಾ. ಶಿ.

ಬರಹಗಾರರು :
ಶ್ರೀ ರಾಶಿ
ಶ್ರೀ ಅ. ರಾ. ಸೆ.
ಶ್ರೀ ಸಿಚ್ಚಿ
ಶ್ರೀ ಪ್ರೊ. ಶೆ
ಶ್ರೀ ಎಂ. ಎಸ್. ಕೆ.
ಶ್ರೀಮತಿ ಸುನೀತಿ
ಕೃಷ್ಣಸ್ವಾಮಿ
ಶ್ರೀ ಕೊಕ್ಕಡ
ದ್ವಾರಕಾನಾಥ
ಶ್ರೀ ಕುಮಾರ್
ಶ್ರೀ ದಾಶರಥಿ ದೀಕ್ಷಿತ್
ಇತ್ಯಾದಿ, ಇತ್ಯಾದಿ.

೨೫ ನ. ಪೈ.

ತಿಳಿನಗೆಯ ಮಾಸಪತ್ರಿಕೆ

ಕೊರವಂಜಿ

A ANANTHIAH

ಸಂಪುಟ ೨೩ ಮೇ ೧೯೬೪ ಸಂಚಿಕೆ ೨

ಕುಹಕಿಡಿಗಳು

ಆಚಾರ್ಯ ವಿನೋಬಾ ಭಾವೆಯವರನ್ನು ಭೇಟಿ ಮಾಡಲು ಷೇಕ್ ಅಬ್ದುಲ್ಲಾ ಆತುರ ಪಡುತ್ತಿದ್ದಾರಂತೆ.

—ಕಾಶ್ಮೀರ್ ದಾನ್ ಮಾಡುವ ಆಸೆಯಿರಬಹುದೇ?

* * * *

ಅಮೆರಿಕಾದಲ್ಲಿ ನಡೆಯುತ್ತಿರುವ ವಸ್ತುಪ್ರದರ್ಶನದಲ್ಲಿ, ಭಾರತದ ಮಾರು ಕಟ್ಟೆಯಲ್ಲಿ ಪಾತ್ರ ವಹಿಸಲು, ಭಾರತ ತರುಣಿಯರನ್ನು ಆಯ್ಕೆಮಾಡಿದಾಗ—

ಪ್ರಾಂತ್ಯಗಳ ಪ್ರಾತಿನಿಧ್ಯವನ್ನು ಗಮನಿಸಲೇ ಇಲ್ಲ—ಮುಖ ನೋಡಿ ಮಣೆ ಹಾಕಿದರು-ಎಂದು ಗುಲ್ಲೆದ್ದಿದೆಯಂತೆ.

* * * *

ಡಾ॥ ಕೆ. ಎಲ್. ರಾಯರು, ಮೈಸೂರು ದೇಶದಲ್ಲಿ ಸಂಚರಿಸಿದ ನಂತರ, ಮಾನ್ಯ ಮುಖ್ಯ ಮಂತ್ರಿಗಳು ಸೂಚಿಸಿದ್ದ ಎರಡೂ ಅಣೆಕಟ್ಟುಗಳಿಗೆ ಒಪ್ಪಿಗೆ ಯಿತ್ತರಂತೆ.

-- ನಾನು ಒಪ್ಪಿದರೆ ಆಯಿತೆ? ಅವರು ಕಾರ್ಯಗತಮಾಡಬೇಕಲ್ಲ, ಎಂದು ಆಂಧ್ರದಲ್ಲಿ ಹೇಳಿದರೆಂಬುದು ಸುಳ್ಳಂತೆ.

* * * *

ಮೈಸೂರಿನ ಗವರ್ನರು ಮದ್ರಾಸಿಗೆ ಗವರ್ನರಾಗಿ ಹೋದುದು ಮೊದಲ ಹೆಜ್ಜೆ.

—ಆಮೇಲೆ ಅಧ್ಯಕ್ಷರಾಗಿ ದಿಲ್ಲಿಗೆ ಹೋಗುತ್ತಾರೆ ಎಂಬುದು ಸ್ವಾಭಾವಿಕ.

೫೦,೦೦೦ ಟನ್ ಅಂಧ್ರದ ಹೊಗೇಸೊಪ್ಪನ್ನು ರಷ್ಯಾಕ್ಕೆ ರವಾನಿಸಲಾಗುತ್ತದಂತೆ.

—ಜತೆಗೆ ೧೦,೦೦೦ ಟನ್ ಆವುಕಾಯ್ ಅನ್ನು ರವಾನಿಸಿ, ಅವರಿಗೆ ಅಭ್ಯಾಸ ಮಾಡಿಸಿದರೆ, ಮಿಕ್ಕ ಹಾಹಾಕಾರವೆಲ್ಲಾ ಥಂಡ ಆಗಿ ಬಿಡಬಹುದು.

* * * *

ಷೇಕ್ ಅಬ್ದುಲ್ಲಾ ಅವರ ಇತ್ತೀಚಿನ ಹೇಳಿಕೆಗಳು, "ಎದ್ದು ಏನನ್ನಾದರೂ ಮಾಡಲೂ ಒಲ್ಲ; ಬಿದ್ದು ಮಲಗಿಕೊಂಡು ನಿದ್ರೆಯನ್ನೂ ಮಾಡುಲ್ಲ" ಎಂದು ಗೊಣಗಿದವಳ ನೆನಪನ್ನು ತರುತ್ತವೆ!

* * * *

ಅಶೋಕ್ ಮೆಹ್ತಾ ಅವರು ಕೇಂದ್ರ ಸಚಿವ ಸಂಪುಟಕ್ಕೆ ಸೇರುತ್ತಾರೆಂಬ ಸುದ್ದಿ ಬಂದ ಕೂಡಲೆ,

—ಪ್ರಜಾ ಸೋಷಿಯಲಿಸ್ಟ್ ಪಕ್ಷದ ಎಲ್ಲ ಸದಸ್ಯರೂ ಕಾಂಗ್ರೇಸಿಗೆ ಸೇರೋಣ ಎಂದು ನಿರ್ಧರಿಸಿದ್ದಾರಂತೆ.

* * * *

ಅಮೆರಿಕಾ ಹಾಗೂ ರಷ್ಯಾದವರು ಅಣು ವಸ್ತುಗಳ ಸಂಗ್ರಹಣೆಯಲ್ಲಿ ಖೋತಾ ಮಾಡಿದ ಸುದ್ದಿಯನ್ನು ಕೇಳಿ

—ನಮ್ಮ ಶಾಸ್ತ್ರಿಗಳು ತಮ್ಮ ಅಣು ಶಸ್ತ್ರಗಳಾದ ದರ್ಭೆ, ಎಳ್ಳುಗಳ ವೆಚ್ಚದಲ್ಲಿ ಖೋತಾ ಹಾಕಿರುವರಂತೆ.

* * * *

ಷೇಕ್ಸ್‌ಪಿಯರನ ಅಮರವಾಕ್ಯಗಳನ್ನು ವ್ಯಾಪಾರಿ ಸಂಸ್ಥೆಗಳು ಜಾಹೀರಾತಿಗಾಗಿ ಬಳಸಿಕೊಂಡಿದ್ದಾರೆ.

—ಆ ನೆಪದಲ್ಲಿಯಾದರೂ ಆತನ ಸ್ಮರಣೆಯಾಯ್ತಲ್ಲ! ಅಷ್ಟೇ ಸಾಕು??

* * * *

ಇಂದಿರಾ ಗಾಂಧಿಯವರು ಅಮೆರಿಕಾದಲ್ಲಿ ಹೇಳಿಕೆ ಇತ್ತಿದ್ದನ್ನು ನೋಡಿದರೆ

—ಇರಬೇಕೇ-ಇಲ್ಲದೆ ಇರಬೇಕೇ ಎಂದು ಹ್ಯಾಮ್ಲೆಟ್ ಹೇಳಿದ ಅಮರ ವಾಕ್ಯಗಳು ಜ್ಞಾಪಕಕ್ಕೆ ಬರುತ್ತವೆ.

* * * *

ಪಾರ್ಲಿಮೆಂಟಿನ ಸದಸ್ಯರು ತಮ್ಮ ಸಂಬಳವನ್ನು ತಾವೇ ಹೆಚ್ಚುಮಾಡಿಕೊಂಡರಂತೆ—

ಕಳ್ಳರ ಕೈಲಿ ಗಂಟು ಕೊಟ್ಟರೆ, ಅವರೇ ಕನ್ನಗತ್ರಿ ಹಾಕಿಬಿಡೋದೇ?

ಕೊರವೇಶ್ವರ ವಚನಗಳು

(ಶೇಖ್ ಅಬ್ದುಲ್ಲರ ಶಾಖ)

ಬಿಡುಗಡೆ ಮಾಡಿದ ಮಾತ್ರಕ್ಕೆ ಅದುಮಿಟ್ಟ ಶಾಖ ಇಳಿಯುವುದೇನಯ್ಯ? ಪರಮಾಧಿಕಾರದ ದಾಹವೆಂಬ ತುಪ್ಪ ಒಳಗುಕ್ಕುತಿರೆ ಪಕ್ಕದ ಪಾಕರ, ದೇಶವಿದೇಶಗಳ ಕಾಕ ಪೋಕರ ಕಳ್ಳಗಾಳಿ ಬೀಸುತಿರೆ ಶೇಖರ ಶಾಖ ಜ್ವಾಲೆಗಳನುಗುಳುತಿರುವುದರಲ್ಲಿ ಆಚ್ಚರಿಯೇನಯ್ಯ! ಜ್ವಾಲೆಯೊಡನೆ ಸರಸವಾಡುವುದೂ ಒಂದು ಗತ್ತೆಂಬ ನಿಂಬೆಕಾಯಿಗಳ ಡಿಪ್ಲೊ-ಮಸಿಯನು ಕಂಡು ಕನಿಕರಿಸುವ ನಮ್ಮ ಕೊರವೇಶ್ವರ.

ಶೇಖರೇ ಸುಮ್ಮನೆ ಮಾತಿನ ಡೊಂಬರಾಟವನಾಡದಿರಿ. ನಿಮ್ಮ ಬಣ್ಣ ಕಂಡವರಲ್ಲವೇ ನಾವು? ಓಂದೆ ಆಡಿದುದನ್ನೆಲ್ಲ ಅಲ್ಲಗಡೆವುದರಿಂದ, ಒಂದನಾಡ ಹೋಗಿ ಒಂಬತ್ತನಾಡುವುದರಿಂದ ಹಿಂದೆ ನೀವಾಡಿದುದು, ಮಾಡಿದುದು, ಅಳಿಸಿ ಹೋಗುವುದೇನಯ್ಯ ಎಂದು ಕೊಶ್ನಿಸುವ ನಮ್ಮ ಕೊರವೇಶ್ವರ.

ಹಿಂದೆ ಎಮ್ಮವರೊಲಿದು ನಿಮ್ಮಲ್ಲಿ ಗಾಳಿ ತುಂಬಿದರು, ನಿಮ್ಮ ಹೊಗಳಿ ಹೊಗಳಿ. ಅಯ್ಯ, ನಮ್ಮವರು ನಿಮಗಿತ್ತ, ಈಯುತ್ತಿರುವ ಮನ್ನಣೆಯೇ ಮುಂದೆ ಮಸೆದಲಗಾಗಿ ತಾಗಲಿದೆಯೆಂಬುದ ಬಲ್ಲೆನಯ್ಯ ಶೇಖರೇ ನೀವೆಮಗೆ ಒಳ್ಳಿತ ಬಯಸುವುದು ನಿಜವಾದರೆ ನಿಮ್ಮ ಮಾತಿನ ಅಂತರ್ಲಾಗಗಳ ನಿಲ್ಲಿಸುವುದು ಕ್ಷೇಮವಯ್ಯ ಎಂಬ ನಮ್ಮ ಕೊರವೇಶ್ವರ.

ನಿಮ್ಮ ಬಡಾಯಿ ಅತ್ತಿಯ ಹಣ್ಣೆಂದು ಬಲ್ಲೆವಯ್ಯ ವಿಚಾರಿಸಿದರೆ ಏನೂ ಹುರುಳಿಲ್ಲವಯ್ಯ ಪ್ರಪಂಚದ ಕಣ್ಣಿನಲ್ಲಿ ನಿಮಗೊಂದು ರೂಪುಮಾಡಿ ನಿಲ್ಲಿಸಿದವರೇ ನಮ್ಮವರು. ನೀವೀಗ ನಮ್ಮವರ ಬೆರಳ ತುಳಿಯುತಿರುವುದ ಕಂಡು ಚಕಿತರಾದೆವಯ್ಯ ಎನುವ ನಮ್ಮ ಕೊರವೇಶ್ವರ.

ನಾವೊಂದು ನೆನೆದರೆ ಶೇಖ ಮತ್ತೊಂದು ನೆನೆವ. ನಾವಿತ್ತಲೆಳೆದರೆ ಶೇಖ ಅತ್ತಲೆಲ್ಲೇ ಎಳೆಯುತಿರುವನಯ್ಯ "ನಾ ಬೇರೆ" ಅನ್ನಿಸುತ್ತಿದೆ ಮಾಯೆ. "ನಾನೊಲ್ಲೆ" ಎಂದು ಕಾಡಿಸುತ್ತಿದೆ ಮಾಯೆ. ಮರ ಮುಪ್ಪಾದರೂ ಹುಳಿ ಮುಪ್ಪಾಗದೆಂಬುದ ಅರಿವು ಮಾಡಿಕೊಡುತಿದೆ ಮಾಯೆ ಎಂದು ತಲೆ ತುರಿಸುವ ನಮ್ಮ ಕೊರವೇಶ್ವರ.

ಎನಿತು ಕಾಲ ಶೇಖ ಜೈಲೊಳಗಿದ್ದರೇನು. ನೆನೆದು ನಯವಾಗಬಲ್ಲನೆ? ಎನಿತು ಕಾಲ ಆತನ ಫಾಸಿ ಮಾಡಿದರೇನಯ್ಯ, ಮನದಲ್ಲಿ ಮಹತ್ವಾಕಾಂಕ್ಷೆ ಪ್ರಜ್ವಲಿಸುತಿರೆ "Barkis is willing" ಎಂದು ಕಾದಿರುವವರಿಗೆ ಮೊಣಕೈಗೆ ಬೆಲ್ಲ ಸವರಿದಂತೆಯೇ ಸರಿ ಎಂಬ ನಮ್ಮ ಕೊರವೇಶ್ವರ

ಆರು ಮುನಿದು ಎಮ್ಮನೇನು ಮಾಡುವರು ? ಶಾಸ್ತ್ರಿ ಥಾಗಲಾದಿಗಳು ಎಷ್ಟು ರೇಗಿದರೇನಯ್ಯ, ನಮ್ಮ ಕುನ್ನಿಯ ಬೆನ್ನು ಚಪ್ಪರಿಸುವವರು ಜಗದೊಳಿಲ್ಲಲ್ಲಿ ಬೇಕಾದಷ್ಟಾಗಿರುವಾಗ ಯಾವ ಶ್ವಾನ ನುಗ್ಗಿಬಂದರೂ ಭಯವಿಲ್ಲವೆಂಬಂತೆ ವರ್ತಿಸುವ ಶೇಖರ ಕಂಡು ಮೂಗಿಗೆ ಬೆರಳೇರಿಸಿದ ನಮ್ಮ ಕೊರವೇಶ್ವರ.

ಕಾಶ್ಮೀರದ ಮಾತು ಬಂದರೆ ಸ್ವಯಂ ನಿರ್ಧಾರವೆಂದು ಕೂಗುವರಯ್ಯ. ಟಿಬೇಟನ ಸೊಲ್ಲೆತ್ತಿದರೆ ಬಡಿಗೆ ಹಿಡಿದು ಬರುವರಯ್ಯ. ಅರವತ್ತು ಕೋಟಿ ಮಂದಿಯ ಮಂಕುಗೊಳಿಸಿ ಮಿಸುಕಾಡಗೊಡದೆ ಆಳುವ ಮಂದಿ ತಮ್ಮ ಮನೆಯ ಯಜಮಾನಿಕೆಯು ತಾವೇ ನೋಡಿಕೊಳುವವರ ಕಂಡು ಕನಿಕರಿಸಿ ಮೊಸಳೆ ಕಣ್ಣೀರ ಸುರಿಸುತಿರುವುದ ನೋಡಿ ಎರಡೂ ಕರಗಳಿಂದ ಮಂಡೆಯ ಹಿಡಕೊಂಡ ನಮ್ಮ ಕೊರವೇಶ್ವರ.

ನಡು ನಡುವೆ ಚತುರತೆಯಿಂದ ಹಿತಚಿಂತಕನಂತೆ ನುಡಿದರೇನು, ದೇಶ ತನ್ನದಲ್ಲ, ತಾನು ದೇಶದವನಲ್ಲ ಎಂಬಂತೆ ನಡೆವವರ, ನುಡಿವವರ ಎಂತು ನಂಬುವು ದೆಂದು ಚಿಂತೆಗೊಳಗಾದ ನಮ್ಮ ಕೊರವೇಶ್ವರ.

ಶೇಖರ ಬಿಡುಗಡೆ ಮಾಡಿ ಅವರ ಬಾಯ ಬೇಗ ತೆರೆದ ಮೇಲೆ ಅವರಿಂದು ದಕ್ಕೆ ಅಸಮಾಧಾನ ಪಟ್ಟರೆಂತಯ್ಯ. ಭೇತಾಳನ ಕಟ್ಟಿಕೊಂಡ ಮೇಲೆ ಅದರೆಲ್ಲ ಕುಣಿತಗಳ ಸಹಿಸಬೇಕಯ್ಯ. ನುಡಿ ಸ್ವಾತಂತ್ರ್ಯವಿತ್ತ ಮೇಲೆ ಬೆಲ್ಲ ಬೇವುಗಳೆರ ಡನೂ ಸ್ವಾಗತಿಸಬೇಕಯ್ಯ. ಶೇಖರ ಪ್ರಲಾಪಗಳ ಅಪಲಾಪಗಳ ಕಂಡು ಕನಲುವ ಜನರನು ಕಂಡು ಕನಿಕರಿಸುವ ನಮ್ಮ ಕೊರವೇಶ್ವರ.

—ರಾಮಿ.

ಹಿಂದಿನ ಕಾಲದಲ್ಲಿ ರಸ್ತೆಪ್ರಯಾಣಿಕರಿಗೆ ತಂಪಾಗಲಿ ಅಂತ ಸಾಲು ಮರ ನಡಿಸುತ್ತಿದ್ದರು.

—ಈಗ ರಸ್ತೆ ಪ್ರಯಾಣಿಕರು ಬದುಕಿಕೊಳ್ಳಲಿ ಅಂತ ಸಾಲು ಮರ ಕಡಿದು ರಸ್ತೆ ದೊಡ್ಡದು ಮಾಡ್ತಾ ಇದ್ದಾರೆ.

ಪ್ರಗತಿ ಅಂದರೆ ಇದು!!

ವಸಂತ ಪರಿವರ್ತನ

ಓದುಗರು ಕ್ಷಮಿಸಬೇಕು. "ವಸಂತದಲ್ಲಿ Prof. ಅಶೋಕರ ಮನಸ್ಸಿನಲ್ಲಾದ ಪರಿವರ್ತನೆಗಳು" ಎಂಬಷ್ಟು ಉದ್ದದ ಹೆಸರನ್ನಿಡಲಾರದೆ ಮೇಲ್ಕಂಡಂತೆ ಹೆಸರನ್ನಿಟ್ಟಿದ್ದೇವೆ. ವಸಂತಾ ಎನ್ನುವ ಹೆಸರಿನ ಕಥಾನಾಯಕಿಯು ನಡತೆಯಲ್ಲಾದ ಪರಿವರ್ತನೆ ಎನ್ನುವ ಮಬ್ಬಿನಲ್ಲಿ ದಯೆಯಿಟ್ಟು ಓದಲಾರಂಭಿಸಬಾರದೆಂದು ನಾವು ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇವೆ.

ಮತ್ತೊಮ್ಮೆ ಮುಗಿಲುಹಳ್ಳಿಗೆ ವಸಂತ ಋತು ಆಗಮಿಸಿದೆ. ತನ್ನ ಸಹಚರರಾದ ಸುಡುಬಿಸಿಲು, ಗಮ್ಮು, ಧೂಳು, ಸೆಖೆ ಸಂಕಟಗಳನ್ನು ತಂದಿದೆ. ಬಿಸಿಗಾಳಿ ಮಧ್ಯಾಕಾಶದಲ್ಲಿ ತೂಗುತ್ತಿದೆ. ಟಾರು, ಕನ್ಸರ್ವೆನ್ಸಿ ಗಲ್ಲಿಗಳ ವಾಸನೆಯೂ ತೂಗುತ್ತಿದೆ. ಮಟ ಮಟ ಮಧ್ಯಾಹ್ನ. ಕತ್ತೆಗಳ ಕೂಗು ದೂರದಲ್ಲೆಲ್ಲೋ ಕೇಳುತ್ತಿದೆ.

ಪ್ರೊಫೆಸರ್ ಅಶೋಕರ ಕಿಟಕಿಯ ಬಾಗಿಲು ಅರೆ ತೆರೆದಿದೆ ಕೋಣೆಯಲ್ಲಿ ಅಶೋಕರು ಎಂದಿನಂತೆ ಕಠೋರ ನಿರ್ಣಯವೊಂದನ್ನು ಕೈಗೊಳ್ಳುತ್ತಾ ಕುಳಿತಿದ್ದರು ಅವರ ಕೆನ್ನೆಯ ಮೇಲೆ ಬೆವರಿನ ಹನಿಗಳು ದಳ ದಳ ಹರಿದು ಬರುತ್ತಿವೆ. ಬ್ಲೇಡಿನ ತುಂಡೊಂದನ್ನು ತೆಗೆದುಕೊಂಡು ಅವರು ಪೆನ್ಸಿಲ್ ತುಂಡನ್ನು ಹೆರೆದರು.

Times of India ದ ಮಾರ್ಜಿನ್ನಿನ ಖಾಲೀ ಜಾಗದಲ್ಲಿ
ಬೆದರುವೆನು ನಾನಿನ್ನ
ಬಿನ್ನಾಣಕೆಲೆ ಹೆಣ್ಣೆ

ಎಂದು ಬರೆದು ನಿಟ್ಟುಸಿರು ಬಿಟ್ಟರು.

ಬಿಳಿ ಕಾಗದವನ್ನು ತೆಗೆದು

Am Off during afternoon
Urgent work

ಎಂದು ಬರೆದರು. ದಟ್ಟಿ ಸುತ್ತಿಕೊಂಡು ಬುಷ್ ಕೋಟನ್ನು ಹಾಕಿಕೊಂಡು, ಚಪ್ಪಲಿಯಲ್ಲಿ ಕಾಲು ತೂರಿಸಿದರು. ನೇವಿಬ್ಲೂ ಸಿಗರೇಟೊಂದನ್ನು ಬಾಯ ಕೊನೆಗೆ ಸಿಕ್ಕಿಸಿ ಕಡ್ಡಿ ಕೆರೆದರು. ಹೊಗೆ ಬಿಡುತ್ತಾ ಬೆಂಕಿಪೆಟ್ಟಿಗೆಯನ್ನು ಜೇಬಿನಲ್ಲಿ ಹಾಕಿ, ಕೊಡೆ ಹಿಡಿದು ಹೊರಕ್ಕೆ ಬಂದರು. ಕೋಣೆಯ ಬೀಗ ಹಾಕಿ ಚಿಲಕದ ನಡುವೆ ತಾವು ಬರೆದ ಚೀಟಿಯನ್ನು ತೂರಿಸಿ ಮತ್ತೊಮ್ಮೆ ನಿಟ್ಟುಸಿರು ಬಿಟ್ಟು 'dammit'

ಎಂದು ಗೊಣಗಿದರು. 'Imposible' ಎಂದು ತಮಗೆ ತಾವೇ ಹೇಳಿಕೊಂಡರು. 'I will runaway! Shall apply for long leave' ಎಂದು ಕೊಂಡರು. 'ಮೆಟ್ಟಿಲಿನಿಂದ ಕೆಳಗೆ ಇಳಿಯುವವರು ಯಾರು?' ಎಂಬ ಬೇಸರ ದಿಂದ ಮೂವತ್ತು ಸೆಕೆಂಡುಗಳ ಕಾಲ ಅಲ್ಲಿಯೇ ನಿಂತಿದ್ದರು. ಅಷ್ಟರಲ್ಲಿ ಮನೆಯ ಮುಂದೆ ಸೈಕಲೊಂದು ಬಂದು ನಿಂತಿತು. ಟಿಕ್ಕಿಕಲರ್ ಬಟ್ಟೆಗಳು ಸರ ಸರ ಸದ್ದು ಮಾಡಿದವು.

"Good Noon teacher!" ಎಂದಳು ಸೈಕಲ್ ತರುಣಿ.

"ನಾನು ಈ ಮಧ್ಯಾಹ್ನ ಇರುವುದಿಲ್ಲ. ನಾಳೆ ಬನ್ನಿ!"

"ಯಾವ ಟೈಮಿಗೆ ಸರ್?"

"Some time."

"ಈಗ ಇದೀರಲ್ಲ ಸರ್!"

"ಊಟಕ್ಕೆ ಹೊರಟಿದ್ದೇನೆ."

"Do come to my home!"

"Excuse me."

"ಸರ್ ನಾಳೆ ನನಗೆ ಕೆಲಸವಿದೆ. ನೀವು ಊಟಕ್ಕೆ ಹೋಗಿ ಬನ್ನಿ. ಇಲ್ಲೇ ಇರುತ್ತೇನೆ."

"ಅನಾವಶ್ಯಕ. ನನಗೆ ಮೀಟಿಂಗ್ ಇದೆ."

"ಯಾವ ಮೀಟಿಂಗ್?"

Prof. ಅಶೋಕರು ಪೇಚಿನಲ್ಲಿ ಬಿದ್ದರು. ಹಾಗೆಯೇ ಅವರ ತಾಳ್ಮೆಯೂ ಬಿದ್ದುಹೋಯಿತು.

"ಬೈ ಬೈ" ಎಂದು ಹೊರಟೇಬಿಟ್ಟರು. ಆದರೆ ಆ ತರುಣಿ ಕಾಂಪೌಂಡ್ ಗೇಟಿಗೆ ಅಡ್ಡವಾಗಿ ನಿಂತಿದ್ದಳು. ಮುಂದೇನು ಮಾಡಬೇಕು? ಷೇಕ್ಸ್‌ಪಿಯರನ ನಾಟಕಕ್ಕೆ ಹೇಗೆ ಬೇಕಾದರೂ ವ್ಯಾಖ್ಯಾನ ಮಾಡಬಲ್ಲ ಅವರು ಹುಡುಗಿಯೊಬ್ಬಳನ್ನು ಕಾಂಪೌಂಡಿನ ಬಾಗಿಲಿನಿಂದ ಸರಿಸಿ ಬೀದಿಗೆ ಹೋಗುವುದನ್ನು ಕಲಿತಿರಲಿಲ್ಲ. ಆ ಹುಡುಗಿಯಾದರೋ ಸ್ತ್ರೀ ಸಹಜವಾದ ಲಜ್ಜೆಯಿಂದಾಗಲೀ, ಮೇಷ್ಟರೆಂಬ ಹೆದರಿಕೆ ಯಿಂದಾಗಲೀ ಪಕ್ಕಕ್ಕೆ ಸರಿಯಬೇಕೆಂಬುದನ್ನು ಕಲಿತಿರಲಿಲ್ಲ.

"ಆರತೀ, ದಾರಿ ಬಿಡು" ಎಂದರು ಪ್ರೊಫೆಸರು. ಆ ಹುಡುಗಿ ಕೊಡಲಿಲ್ಲ

"All right, ಇಲ್ಲೇ ನಿಂತಿರು ಊಟ ಮಾಡಿ ಬರುತ್ತೇನೆ."

" ಸೈಕಲ್ ತೆಗೆದುಕೊಂಡು ಹೋಗಿ ಸಾರ್ !"

" I hate the Cycles "

" ನೀವು ಬರುವುದು ಬಹಳ ಹೊತ್ತಾಗುತ್ತದೆಯೇನೋ Shall I accompany ?

" ಬೇಡ ಬೇಡ "

" ಪರೀಕ್ಷೆ ಇನ್ನು ನಾಲ್ಕೇ ದಿನ ಇದೇ ಸರ್ !"

" ಪೋರ್ಷನ್ಸ್ ಮುಗಿಸಿದ್ದೇನಲ್ಲ ?

" ಒಂದೆರಡು ಅನುಮಾನಗಳಿವೆ ಸರ್. ಪರಿಹರಿಸಿಬಿಡಿ. ಆಮೇಲೆ ನಿಮಗೆ ತೊಂದರೆ ಕೊಡುವುದಿಲ್ಲ. "

" ನನಗೆ ಸಾವಿರಾರು ಅನುಮಾನಗಳಿವೆ. ಅವನ್ನು ಪರಿಹರಿಸುವವರು ಯಾರು ?

ಪ್ರೊಫೆಸರ ಈ ಯಾತನಾಮಯವಾದ ಪ್ರಶ್ನೆಯನ್ನು ಕೇಳಿ ಆರತಿ ನೊಂದು ನಿಟ್ಟುಸಿರು ಬಿಟ್ಟಳು. ದಾರಿಯನ್ನೂ ಬಿಟ್ಟಳು.

" ನಾಳೆ ಬರಲೇ ಸರ್ ?

" ಹಾಗೆ ಮಾಡು "

ಆ ತರುಣಿ ಸೈಕಲ್ ಹತ್ತಿ ಹೊರಟುಹೋದಳು.

ಪ್ರೊಫೆಸರು ನಿರ್ವಿಣ್ಣಚಿತ್ತರಾಗಿ ಬಿಸಿಲಿನಲ್ಲಿ ನಡೆದು ಹೋದರು. ಹೋಟಲಿನಲ್ಲಿ ಊಟ ಮುಗಿಸಿದ ಅವರು ನಗರ ವಿಸ್ತರಣದ ಒಂದು ಮೂಲೆಗೆ ಹೋದರು ಆ ಕೊನೆಯಲ್ಲಿ ನಾಲ್ಕಾರು ವರ್ಕ್‌ಷಾಪುಗಳಿವೆ. ಸುತ್ತಮುತ್ತಲೂ ಇನ್ನೂ ಮನೆಗಳನ್ನು ಕಟ್ಟಿಲ್ಲ. ಊರಿನಲ್ಲಿ ಪದಸ್ಥರೆನ್ನಿಸಿಕೊಂಡವರಿಗೇ ನೀರನ್ನೂ ಬೆಳಕನ್ನೂ ಸರಬರಾಜು ಮಾಡದ ಪುರಸಭೆ ಆ ಮೂಲೆಯಲ್ಲಿ ಸರಿಯಾಗಿ ರಸ್ತೆಗಳನ್ನು ಮಾಡಿಸೀತೇ ? ಸಿಮೆಂಟ್, ಟಾರ್, ಜಲ್ಲಿ, ರಸ್ತೆಗಳನ್ನು ಏಕಾಪೋಶನ ತೆಗೆದುಕೊಳ್ಳುವ ಲಾರಿಗಳು ಬರಿ ಮಣ್ಣು ರಸ್ತೆಗಳನ್ನು ಬಿಟ್ಟಾವೇ ? ಸತತವಾಗಿ ಚೀರುವ ವೆಲ್ಡಿಂಗ್ ಮೆಷಿನುಗಳು, ಘುರುಘುರಿಸುವ ಲಾರಿಗಳು ಆ ನಿರ್ಜನ ವಾತಾವರಣದಲ್ಲಿ ನಾಗರಿಕತೆಯ ವಿಜಯ ಧ್ವಜವನ್ನು ಎತ್ತಿ ಹಿಡಿದಿದ್ದವು. ಮೋಟರ್ ಆಯಿಲ್, ಡೀಸೆಲ್ ಎಣ್ಣೆ, ಇತ್ಯಾದಿಗಳ ವಾಸನೆ ವಸಂತ ಋತುವಿನ ಮುಖಕ್ಕೆ ಕಪ್ಪು ಬಳಿಯುತ್ತಿದ್ದವು. Where are the songs of spring,—ಏ—where are they ? ರಣ ರಣ ಬಿಸಿಲು ಇಲ್ಲಿ ಇನ್ನೂ ಹೆಚ್ಚು ರಣರಣವಾಗಿತ್ತು.

ಈ ನಗರಾಂತದಲ್ಲಿ ಪ್ರೊಫೆಸರು ಒಂದು ಹಳೆಯ ಹುಣಿಸೆ ಮರವನ್ನು ನೋಡಿದರು ಬಹುಶಃ 1861ರಲ್ಲಿ ಆ ಹುಣಿಸೆ ಮರ ಹುಟ್ಟಿರಬಹುದು. ಅದರ ಬೊಡ್ಡೆ ಗಂಟು ಗಂಟಾಗಿ ಹೋಗಿತ್ತು. ಆ ಬೊಡ್ಡೆಯ ಮೇಲಿನ ಕೊಂಬೆಗಳು ಅಟಾಮಿಕ್

ಬ್ಲಾಸ್ಟಿನ ನಂತರ ಏಳುವ ಧೂಮ ಛತ್ರಾಕಾರದಲ್ಲಿದ್ದವು. ವರ್ಕ್‌ಷಾಪುಗಳ ಕಡೆಯ ಕೊಂಬೆಗಳೆಲ್ಲಾ ಬೋಡುಬೋಡಾಗಿದ್ದವು. ಹೊಗೆ ಬಡಿದು ಕಪ್ಪಾಗಿದ್ದವು. ದಿಗಂತದ ಕಡೆಯ ಕೊಂಬೆಗಳಲ್ಲಿ ನವಪಲ್ಲವಗಳಿದ್ದವು. ಎಳೆ ತಳಿರು ಕೆಲವೆಡೆ ನಸುಗೆಂಪಾಗಿಯೂ ಇನ್ನು ಕೆಲವೆಡೆ ಹಸಿರಾಗಿಯೂ ಇತ್ತು. ಪ್ರೊಫೆಸರು ಆ ಮರದ ಕೆಳಗೆ ಹೋಗಿ ಮರದ ಬೊಡ್ಡೆಗೆ ಒರಗಿ ನಿಂತರು. ಕಣ್ಣು ಮುಚ್ಚಿದರು. ಹಾಗೆಯೇ ಮಂಪರು ಬಂದ ಹಾಗಾಯಿತು.

ತಮ್ಮ ಕೋಣೆಯಲ್ಲಿ ಪೇರಿಸಿದ್ದ ಪುಸ್ತಕಗಳನ್ನು ಅವರು ಕಿಟಕಿಯಿಂದ ಹೊರಕ್ಕೆಸೆದು ಮುಗಿಸಿದರು. ಕೋಣೆಯಿಂದ ಹೊರಕ್ಕೆ ಬಂದರು ಗೋಡೆಯ ಪಕ್ಕದಲ್ಲಿ ಲೇಡೀಸ್ ಬೈಸಿಕಲ್ ನಿಂತಿತ್ತು. ಅದನ್ನೂ ಮೇಲಕ್ಕೆತ್ತಿ ಕಾಂಪೌಂಡಿನಾಚೆಗೆ ಎಸೆದರು.

ಪಕ್ಕದ ಮನೆಯಿಂದ "ಏನಲೇ ಅದು. ಏನ್ಬಂತೋ ನಿಂಗೆ?" ಎಂದು ಯಾರೊ ಕೂಗಿದರು. ಛಾವಣಿಯ ಮೇಲ್ಗಡೆಯಿಂದ ಇಣುಕಿ ನೋಡಿದ ಆರತಿ

" ಸರ್, How could Orlando love Rosalind? what is love? ಎಂದಳು.

ಪ್ರೊಫೆಸರು ಅವಳ ದನಿ ಕೇಳಿದ ಕೂಡಲೇ ಓಡಲಾರಂಭಿಸಿದರು. ಜಾಧವ ನಗರ್ ಯೂನಿವರ್ಸಿಟಿಯಲ್ಲಿ 800 ರೂಪಾಯಿ ಸಂಬಳದ ಕೆಲಸ ಖಾಲೀ ಇತ್ತು ಅದು ಭರ್ತಿಯಾಗಲು ಇನ್ನು ಕೇವಲ ಕೆಲವೇ ಸೆಕೆಂಡುಗಳಿದ್ದವು. " ಲವ್ " ಎಂದರೆ ಏನು ಬೇಕಾದರೂ ಆಗಬಹುದು. ಆದರೆ ಜಾಧವ ನಗರ್ ಯೂನಿವರ್ಸಿಟಿಯ ರೀಡರ್‌ಗಿರಿ ಎಂದರೆ ತಿಂಗಳಿಗೆ ಎಂಟು ನೂರು ರೂಪಾಯಿ ಎಂದರ್ಥ.

ಪ್ರೊಫೆಸರು ಓಡುತ್ತಲೇ ಇದ್ದರು. ಅವರೆದುರು ಒಂದು ಚಿಕ್ಕ ಚಿಕ್ಕೆಯ ಚಿರತೆ ಕಾಣಿಸಿಕೊಂಡಿತು. ಅದಕ್ಕಿನ್ನೂ ಎಳೆಹರೆಯ. ಆ ಚಿರತೆ ಬಾಯಿ ತೆರೆಯಿತು. ಮುಂಗಾಲುಗಳನ್ನು ಮೇಲೆತ್ತಿ ಪ್ರೊಫೆಸರ ನೆತ್ತಿಯ ಮೇಲಕ್ಕೆ ಹಾರಿ ಕುಳಿತು ತನ್ನ ಬಲಗಾಲಿನ ಪಂಜದಿಂದ ಅವರ ಕತ್ತಿನ ಹಿಂಭಾಗವನ್ನು ಹಿಡಿಯಿತು.

ಪ್ರೊಫೆಸರು ತಮ್ಮ ಅಂತ್ಯಕಾಲ ಬಂತೆಂದು ಎಲಿಯಟ್, ಆಡೆನ್, ಲೀವಿಸ್‌ಗಳನ್ನು ನೆನೆದು ಕಣ್ಣು ತೆರೆದು ಕತ್ತನ್ನು ತಡವರಿಸಿದರು. ಕರಿಗೊದ್ದವೊಂದು ರಕ್ತವನ್ನು ಹೀರುತ್ತಿತ್ತು.

(ಸಶೇಷ)

—ಆ. ರಾ. ಸೇ.

ಷೇಕ್ಸ್‌ಪಿಯರರ ನಾನ್ನೂರನೇ ವರ್ಧಂತಿ

ಇನ್ನಿಲ್ಲದ ಹಾಗೆ ಹೇಳಿದೆ. ಆದರೆ ಈ ಹುಡುಗರು ಕೇಳಬೇಕಲ್ಲ? ಹೋಗಿ "ಮಹಾಸ್ವಾಮಿ! ಷೇಕ್ಸ್‌ಪಿಯರರ ನಾನ್ನೂರನೆ ಹುಟ್ಟಿದ ಹಬ್ಬವನ್ನು ನಾವು ಆಚರಿಸುತ್ತಿದ್ದೇವೆ. ಮೊನ್ನೆ ಮೊನ್ನೆ ನಡೆದ ಪುರಂದರದಾಸರ ನಾನ್ನೂರನೇ ಪುಣ್ಯತಿಥಿಗೂ ನೀವು ದಯಮಾಡಿಸಿ, ನಿಮ್ಮ ಅಮೃತ ಹಸ್ತದಿಂದ, ಆ ಹಿರಿಯಾತ್ಮನಿಗೆ ಎಳ್ಳು ನೀರು ಬಿಟ್ಟಿರಿ. ಈ ಉತ್ಸವಕ್ಕೂ ಬಂದು, ಷೇಕ್ಸ್‌ಪಿಯರರ ನಾನ್ನೂರನೆ ಹುಟ್ಟಿದ ಹಬ್ಬದ ದಿವಸ, ತಮ್ಮ ಅಮೃತ ಹಸ್ತದಿಂದ, ಸಕ್ಕರೆ ಹಂಚಬೇಕು" ಎಂದು ನಾಯಕರನ್ನು ಕೇಳಿಬಿಟ್ಟರು.

ನಾಯಕರು ತತ್‌ಕ್ಷಣ ಒಪ್ಪಿಕೊಂಡರು. "ಶಾಲಾ ಕಾಲೇಜು ಫೀ, ವಿದ್ಯಾರ್ಥಿ ವೇತನ, ಇತ್ಯಾದಿಗಳನ್ನು ಹೊರತು, ಇನ್ನು ಯಾವ ಕೆಲಸಕ್ಕೆ ಬಂದರೂ ನಾವು ಅಸ್ತು ಎಂದು ಹೇಳಿಯೇ ಹೇಳುತ್ತೇವೆ" ಎಂದು ತಮ್ಮ ಧ್ಯೇಯ ಸಾಧನೆಗಳನ್ನೂ ವಿವರಿಸಿದರು. ಉತ್ಸವದ ಬೆಳಿಗ್ಗೆ ಬಂದು ಜ್ಞಾಪಕ ಕೊಡಿ ಎಂದೂ ನಾಯಕರು ಹೇಳಿದರು.

ಉತ್ಸವದ ಹಿಂದಿನ ದಿವಸ ಕೂಡ ಹೇಳಿದೆ. "ಹುಡುಗರಾ! ನಾಳೆ ಬೆಳಿಗ್ಗೆ ನೀವು ಹೋಗಿ ನಾಯಕರನ್ನು ಪುನಃ ಕರೆಯಬೇಕು. ಇಲ್ಲದೆ ಇದ್ದರೆ ಖಂಡಿತವಾಗಿ ಮರೆತುಬಿಟ್ಟಿರುತ್ತಾರೆ. ಇಂತಹ ಸದವಕಾಶವನ್ನು ಕಳೆದುಕೊಳ್ಳಬಾರದು. ನಾಳೆ ಹೋಗಲೇ ಬೇಡಿ. ನಾವು ನಾವೇ ಉತ್ಸವವನ್ನು ಹೃದಯಾಂತರಾಳದಿಂದ, ಭಕ್ತಿಯಿಂದ ಆಚರಿಸೋಣ" ಎಂದು ಬೇಡಿಕೊಂಡೆ. ಆದರೂ ಆ ಹುಡುಗರು ಕೇಳಬೇಕಲ್ಲ. ಮಾರನೆ ಬೆಳಿಗ್ಗೆ ಹೋಗಿಯೇ ಹೋದರು. ನಾಯಕರನ್ನು ಜ್ಞಾಪಿಸಿಯೇ ಜ್ಞಾಪಿಸಿದರು.

ಸಂಜೆ ಐದಕ್ಕೆ ಉತ್ಸವವು ಶುರುವಾಗಬೇಕಾಗಿತ್ತು. ಐದೂವರೆಯ ಹೊತ್ತಿಗೂ ನಾಯಕರು ಬಂದಿರಲಿಲ್ಲ. ಹುಡುಗರಿಗೂ ಬೇಸರ ಬಂತು ಶುರು ಮಾಡಿಬಿಡೋಣ ಸಾರ್, ಅವರು ಬಂದಾಗ ಹಸೆಮಣೆ ಮೇಲಕ್ಕೆ ಕರೆದುಕೊಂಡು ಹೋಗಿ ಕೂರಿಸೋಣ. ಅವರೂ ಭಾಷಣಮಾಡಲಿ. ಹಾರವನ್ನು ಹೇಗೂ ತಂದಿದ್ದೀವಿ. ಅವರು ಬರದೆ ಇದ್ದರೆ ಷೇಕ್ಸ್‌ಪಿಯರರ ಫೋಟೋಗೆ ಅದನ್ನೂ ಹಾಕಿಬಿಡೋಣ ಎಂದು ಹೇಳಿದರು. ಪ್ರಿನ್ಸಿಪಾಲ್ ನಾನು. ಈಗಿನ ಕಾಲದ ಪ್ರಿನ್ಸಿಪಾಲ್. ಹುಡುಗರು ಕುಣಿಸಿದ ಹಾಗೆ ಕುಣಿಯಲೇ ಬೇಕು.

* * * *

ಉತ್ಸವ ಶುರುವಾಯಿತು. ಕಾಲೇಜಿನ ಇಂಗ್ಲೀಷ್ ಪ್ರೊಫೆಸರು, ಷೇಕ್ಸ್‌ಫಿಯರ್ ಹೇಗೆ ಕಾಲಾತೀತ ಎಂಬುದನ್ನು ಲಕ್ಷಣವಾಗಿ ವಿವರಿಸಿದರು. ಅನಂತರ ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರು ಷೇಕ್ಸ್‌ಪಿಯರನ ಆಯ್ದ ಅಮರ ಪಂಕ್ತಿಗಳನ್ನು ಪಠಿಸಲು ಶುರುಮಾಡಿದರು.

To be or not to be, That is the Question ಎಂದು ಒಬ್ಬ ವಿದ್ಯಾರ್ಥಿಯು ಗಮಕಿಸಲು ಶುರು ಮಾಡುವ ಹೊತ್ತಿಗೆ ನಾಯಕರು ಬಂದರು. ಹೊರಗಡೆ ಇದ್ದ ಪೋಲೀಸಿನವರ ಗದ್ದಲದಿಂದ ಏನೋ ಅನಾಹುತ ಆಗಿದೆ ಎಂದು ವಿದ್ಯಾರ್ಥಿಯು ಒಂದು ನಿಮಿಷ ಸುಮ್ಮನಾದ. ಆ ಅಂತರದಲ್ಲಿ ನಾಯಕರು ಠೀವಿಯಿಂದ ಬಂದು ಹಸೆ ಮಣೆಯನ್ನು ಹತ್ತಿ ಪ್ರಿನ್ಸಿಪಾಲರ ಪಕ್ಕದಲ್ಲಿ ಕುಳಿತು, ಅವರ ಕಿವಿಯಲ್ಲಿ ಏನನ್ನೋ ಹೇಳಿದರು. ಆಗ ಪ್ರಿನ್ಸಿಪಾಲರು ಎದ್ದು "ನಮ್ಮ ನಾಯಕರು ಇನ್ನೂರು ಮೈಲಿ ದೂರದ ಊರಿನಿಂದ ಈಗ ತಾನೆ ಹಿಂತಿರುಗಿದ್ದಾರೆ. ತಮ್ಮ ಭಾಷಣ ಮುಗಿಸಿ ಬೇಗ ಹೋಗಬೇಕು ಎಂದು ಇಚ್ಛಿಸುತ್ತಾರೆ. ಆದ್ದರಿಂದ ಗಮಕಿಗಳ ಪಠಣವನ್ನು ಮುಂದುವರೆಸಿ, ನಾಯಕರ ದಿವ್ಯ ಭಾಷಣವನ್ನು ಈಗ ಕೇಳೋಣ" ಎಂದು ಕಾರ್ಯಕ್ರಮದ ಬದಲಾವಣೆಯನ್ನು ಸೂಚಿಸಿದರು.

ಪ್ರಚಂಡ ಕರತಾಡನಗಳು, ಬೆಂಚು ಕುಟ್ಟುವುದು, ಸೀಟಿ ಹಾಕುವುದು ಇವುಗಳ ಮಧ್ಯೆ ನಾಯಕರು ಎದ್ದು ನಿಂತರು.

ಪ್ರಿನ್ಸಿಪಾಲ್ ಮಹಾಶಯರೇ, ನನ್ನ ಪ್ರೀತಿಯ ವಿದ್ಯಾರ್ಥಿಗಳೇ, ಇವತ್ತಿನ ಸಮಾರಂಭಕ್ಕೆ ನನ್ನನ್ನು ಬರಮಾಡಿಕೊಂಡಿದ್ದಕ್ಕೆ ಕೃತಜ್ಞತೆಗಳು. ಕ್ಯಾತನೂರಿನಲ್ಲಿ ಕುರಿದೊಡ್ಡಿಯೊಂದನ್ನು ಉದ್ಘಾಟಿಸಿ ಬರಬೇಕಾದ್ದರಿಂದ ಇಲ್ಲಿಗೆ ಬರಲು ಸ್ವಲ್ಪ ವಿಳಂಬವಾಯಿತು.

ಯಾವ ಕೀರ್ತಿವಂತನ ಸ್ಮರಣೆಗಾಗಿ ನೀವು ಈ ಉತ್ಸವವನ್ನು ಏರ್ಪಡಿಸಿದ್ದೀರೋ ಅತನ ಸ್ವಂತ ಪರಿಚಯ ನನಗಿದೆ. ಕೆಲವಾರು ವರ್ಷಗಳ ಹಿಂದೆ ಕಾಶ್ಮೀರಕ್ಕೆ ಬೇಸಿಗೆಯಲ್ಲಿ ಹೋಗಿದ್ದಾಗ ಅಲ್ಲಿ ಆತನ ಭೇಟಿಯಾಯಿತು. ಆತನೊಡನೆ ಖುದ್ದಾಗಿ ಮಾತನಾಡಿದಾಗ ಆತನ ಯೋಗ್ಯತೆ ತಿಳಿಯಿತು. ತುಂಬಾ ಜಾಣ. ತುಂಬಾ ಅನುಭವಸ್ಥ. ಷೇಕ್ ಅಬ್ದುಲ್ಲಾ ಅಂದರೆ ಆಣಿ ಮುತ್ತಿನಂತಹ ಮಾತುಗಳನ್ನಾಡುತ್ತಾನೆ. ಅವನ ವರ್ಧಂತಿಯನ್ನು ಆಚರಿಸುವುದು ನ್ಯಾಯವೇ.

ಎಂದು ಹದಿನೈದು ನಿಮಿಷ ಭಾಷಣ ಬಿಗಿದೇಬಿಟ್ಟರು. ದಿಗ್ಭ್ರಮೆ ಹೊಂದಿದ ಹುಡುಗರು, ಕಾಲೇಜು ಉಪಾಧ್ಯಾಯರುಗಳೂ, ಹಾರವನ್ನು ಹಾಕಲು ಮರೆತರು. ನಾಯಕರು ಎರಡೂ ಕೈ ಎತ್ತಿ ಜೋಡಿಸಿ ನಮಸ್ತೆಮಾಡಿ, ಹೊರಟೇ ಹೋದರು. ಎಲ್ಲರೂ ಕಕವಿಕಿಯಾದರು.

ಹಣೆ ಬೆವರು ಒರೆಸಿಕೊಂಡು ಪ್ರಿನ್ಸಿಪಾಲರು ಕಾರ್ಯಕ್ರಮವನ್ನು ಮುಂದುವರಿಸುವ ಮುನ್ನ ಕುರಿದೊಡ್ಡಿ ಉದ್ಘಾಟನೆಮಾಡಿ ಬಂದ ಮೇಲೆ ಷೇಕ್ಸ್‌ಪಿಯರ್‌ಗೂ ಷೇಕ್ ಅಬ್ದುಲ್ಲಾ ವಿಗೂ ವ್ಯತ್ಯಾಸವು ಕಾಣದೆ ಬರಬಹುದು. ಆದರೆ ನಾವು ಷೇಕ್ಸ್‌ಪಿಯರ್ ಒಬ್ಬನ ವರ್ಧಂತಿಯನ್ನೇ ಇಂದು ಪೂರ್ಣವಾಗಿ ಆಚರಿಸೋಣ ಎಂದು ಪೀಠಿಕೆ ನಂತರ ಮುಂದುವರಿಸಿದರು.

—ವರದಿಗಾರ ಬಚ್ಚು.



ರೋಗಿಗೆ ಕೊಟ್ಟಿದ್ದು ಅಮೆರಿಕಾದ ಹಾಲಿನ ಪುಡಿಯಲ್ಲರೀ!
ಬೇರಿಯಂ ಕಷಾಯ !!

ಅಭ್ಯಾಗತರು

ವಾರದ ಹುಡುಗರಿಗೆ ಅನ್ನ ಹಾಕುವ ರೀತಿಯಲ್ಲಿ ಈಚೆಗೆ ವಿದ್ಯುಚ್ಛಕ್ತಿಯನ್ನು ಕಾರ್ಖಾನೆಗಳಿಗೆ ಹಂಚುತ್ತಾರಲ್ಲ, ಆ ಕಾರಣದಿಂದ ನಮ್ಮ ಕಾರ್ಖಾನೆಗೆ ಬುಧುವಾರ ರಜ. ದಿನಾಗಲೂ ದ್ವಾದಶಿ ಆಚರಿಸುವವರಂತೆ ಆರಕ್ಕೆ ಎದ್ದು ಆರೂವರೆಗೆ ಸಿದ್ಧವಾಗಿ ಬಸ್ಸಿಗೆ ಓಡಿ, ಏಳಕ್ಕೆ ಕಾರ್ಖಾನೆಯಲ್ಲಿ ಹಾಜರಾಗುವ ನಮ್ಮಂತಹವರಿಗೆ ಬುಧುವಾರ ಭಾನುವಾರವಾದಾಗ ಬಲು ಖುಷಿ. ಆರಕ್ಕೆ ಎಚ್ಚರವಾದರೂ ಎಂಟರ ತನಕ ಹೊರಳಾಡಿ, ಒಂಭತ್ತಕ್ಕೆ ತಿಂಡಿ ಕಾಫಿ ಮುಗಿಸಿ, ಡ್ರಾಯಿಂಗ್ ರೂಮಿನಲ್ಲಿ ಪೇಪರ್ ಹಿಡಿದು ಆರಾಮವಾಗಿ ಕೂತರೆ, ದೈನಂದಿನ ಪತ್ರಿಕೆ ಬೆಲೆ ೧೦ ನ.ಪೈ. ಇಂದ ಹಿಡಿದು, ಇಂತಹವರ ಮುದ್ರಣಾಲಯದಲ್ಲಿ ಇಂತಹವರ ಸಂಪಾದಕತ್ವದಲ್ಲಿ ಇಂತಹವರಿಂದ ಪ್ರಕಟವಾಯಿತು. ವಿರಾಮ ಚಿಹ್ನೆ. ಯ ತನಕ ಓದುವ ಸಂಭ್ರಮ.

ಬುಧುವಾರ ಹಾಗೆ ಕೂತ ಎರಡು ನಿಮಿಷದಲ್ಲಿ ರಂಗ ಓಡಿ ಬಂದ. "ಸೋಮಿ! ಯಾರೋ ರಾವ್ ಬಹದ್ದೂರರಂತೆ ಬಂದವ್ರೆ" ಎಂದು ಹೇಳಿದ. ಒಳಗೆ ಬರ ಹೇಳು ಎಂದು ನಾನು ಹೇಳುವ ಮೊದಲೇ ಸರಿಗೆ ರುಮಾಲು, ಕರಿ ನಿಲುವಂಗಿ, ಗರಿ ಅಂಗವಸ್ತ್ರ, ಮೇಲುಕೋಟೆ ಪಂಚೆ ಧರಿಸಿದ ಹಿರಿಯರೊಬ್ಬರು ಒಳಕ್ಕೆ ಬಂದರು. ಸೋಫಾದ ಮೇಲೆ ಕೂತರು. ಕಾಲ್ಮೇಜಿನ ಮೇಲಿದ್ದ ಮಾಸ ಪತ್ರಿಕೆಯನ್ನು ತೆಗೆದುಕೊಂಡು ಓದುಕ್ಕೆ ಶುರು ಮಾಡಿದರು.

"ಓಹೋ! ಮನೆ ಯಜಮಾನ ಒಳಗಿದ್ದಾನೆ, ಅಂದುಕೊಂಡಿದ್ದಾರೆ. ಬನಿಯನ್ನು ಬರಿ ಚಡ್ಡಿ ಧರಿಸಿದ್ದ ನಾನು ಮನೆಯವರ ದೂರದ ನೆಂಟ ಅಂತ ತಿಳಿದುಕೊಂಡಿರಬೇಕು. ಅದಕ್ಕೇ ಮಾಸಪತ್ರಿಕೆ ಹಿಡಿದು ಕೂತಿದ್ದಾರೆ. ಇವರ ಡಿಖಾವ್ ನೋಡಿದರೆ ಪ್ರಾಯಶಃ ಯಾವುದೋ ರಾಮನವಮಿ ಸಪ್ತಾಹಕ್ಕೆ ಚಂದಾ ಬೇಡಲು ಬಂದ ಹಾಗೆ ಕಾಣುತ್ತೆ. ಅಥವಾ ಆ ವ್ಯವಹಾರದಲ್ಲಿ ಈತನ ಬಟ್ಟೆಯ ಇಸ್ತ್ರಿಗೆ ಬೇಕಾಗುವ ಹಣವೂ ದೊರೆಯುವುದಿಲ್ಲ. ಆದುದರಿಂದ ಇನ್ನು ಯಾವುದೋ ದೊಡ್ಡ ಬೇಟೆ ಆಡುಕ್ಕೆ ಬಂದಿರಬಹುದು. ಬೆಳೆದ ಗಂಡು ಮಕ್ಕಳಿಲ್ಲ ನನಗೆ: ಅಂದಮೇಲೆ ವರಾನ್ವೇಷಣಕ್ಕೆ ಬಂದಿರಲಾರರು! ತಡಿ! ಭಾವಮೈದುನ ಎಂ.ಬಿ. ಬಿ.ಎಸ್.ಗೆ ಕೂತಿದ್ದಾನೆ. ಅವನನ್ನು ಬುಟ್ಟೀಗೆ ಹಾಕುವ ಸನ್ನಾಹದಲ್ಲಿ ಮೊದಲು ನನ್ನನ್ನು ಸರಿಮಾಡಿಕೊಂಡು, ನನ್ನ ಹೆಂಡತಿಯನ್ನು ಶಾಮಿಲು ಮಾಡಿಕೊಂಡು, ಆಮೇಲೆ ಬೇಟೆಗೆ ಶುರು ಮಾಡಬಹುದು.

ಎಂದೆಲ್ಲಾ ಯೋಚಿಸಿ, "ನಮಸ್ಕಾರ ರಾಯರೇ! ತಾವು ಬಂದ ಕಾರ್ಯ ವೇನೋ" ಎಂದು ಲೋಕಾಭಿರಾಮನಾಗಿ ಕೇಳಿದೆ. ಹಾಗೆ ಮಾತನಾಡಿಸಿದರೆ, ಮನೆಯ ಯಜಮಾನ ನಾನೇ ಅಂತ ಅರ್ಥವಾಗುತ್ತೆ ಎಂದು ನನ್ನ ಕಲ್ಪನೆ.

ಮಾಸ ಪತ್ರಿಕೆಯನ್ನು ತೊಡೆಯಮೇಲಿರಿಸಿದ. ನನ್ನನ್ನೇ ದುರುಗುಟ್ಟಿ ಕೊಂಡು ನೋಡಿದ. "ಯಾಕ್ರೀ! ಮಾತನಾಡಿಸಿದರೆ ನನ್ನ ಹೆದರಿಕೆ ಕಡಿಮೆ ಯಾಗುತ್ತೆ ಅಂತ ಉಭಯ ಕುಶಲೋಪರಿಗೆ ಶುರುಮಾಡಿದಿರಾ? ನನಗೇನೂ ಭಯ ವಿಲ್ಲ ಕಣ್ರಿ. ಏನೂ ಬಂದರೂ ಎದುರಿಸ್ತೀನಿ. ಏನಾದರೂ ತಡಕೋತೀನಿ. ನಿಮ್ಮ ಪಾಡು ನೀವು ನೋಡಿಕೊಳ್ಳ್ರೀ. ನಿಮಗೆ ಭಯವಾದರೆ ನನ್ನನ್ನು ಯಾಕೆ ಮಾತಾಡಿಸ್ತೀರಿ ಧೈರ್ಯ ತಂದುಕೊಳ್ಳ್ರಿ. ಅಂತ ಜವಾಬು ಹೇಳಿ ತಿರುಗಿ ಮಾಸ ಪತ್ರಿಕೆ ತೆರೆದು ಮುಖವನ್ನು ಅದರ ಹಿಂದೆ ಮರೆಸಿಕೊಂಡ.

ಇವನಿಗೇನು ಹುಚ್ಚ್ಯೋ ಬೆಪ್ಪೋ ಶಿವಲೀಲೇನೋ? ಸೆಟ್ಟಗೆ ನನ್ನ ಮನೆಗೆ ಬಂದು, ನನ್ನ ಬೈಠಕ್ ಖಾನೆಯಲ್ಲಿ ಕೂತು ನನ್ನ ಪತ್ರಿಕೆಯನ್ನು ಓದುಕ್ಕೆ ಶುರು ಮಾಡಿ, ಯಾಕಪ್ಪಾ ಬಂದೆ ಅಂದರೆ ನನಗೆ ಬುದ್ಧಿ ಹೇಳ್ತಾನಲ್ಲ! ಧೈರ್ಯ ತೊಗೋ ಅಂತ. ರಂಗನ್ನ ಕರೆದು ಇಬ್ಬರೂ ಸೇರಿಕೊಂಡು ಒದ್ದು ಓಡಿಸೋಣವೇ ಎಂದು ಅನ್ನಿಸಿತು.

"ರಂಗ" ಅಂತ ಕೂಗುತ್ತಾ ಎದ್ದೆ.

ರಂಗ ಒಳಕ್ಕೆ ಬಂದ. "ಸೋಮಿ, ಯಾರೋ ಒಬ್ಬಾಕೆ ಮಗುವನ್ನು ಕರ ಕೊಂಡು ಬಂದಿದ್ದಾರೆ. ಗೇಟಿನ ಹತ್ತಿರ ರಾಯರು ಇದಾರೆಯೇ" ಎಂದು ಕೇಳಿದರು. ಇದಾರೆ ಅಂದೆ ಒಳಕ್ಕೆ ಬರ್ತಾ ಇದಾರೆ ಎಂದು ಹೇಳಿದ.

ತುಂಬು ಮೈಯ್ಯಿನ ಪ್ರಾಯದ ಪಂಜಾಬಿ ಹೆಂಗಸು. ಎಳಕಿನ ಕಳೆ ಮುಖ ದಲ್ಲಿದ್ದರೂ ಸುಮಾರು ೨೦೦ ಪೌಂಡು ತೂಕವಿರುವ ಮೈಕಟ್ಟು. ಎಂಟು ವರ್ಷದ ಹುಡುಗನೊಬ್ಬನನ್ನು ಜತೆಗೆ ಕರೆದುಕೊಂಡು ಬಂದಿದ್ದಳು. ಬಂದ ಆಕೆ ಕುರ್ಚಿಯ ಮೇಲೆ ಕುಳಿತಳು. ಮಗನನ್ನು ಕಾಲಬಳಿ ನಿಲ್ಲಿಸಿಕೊಂಡಳು. ಮಗನ ತಲೆಯನ್ನು ನೇವರಿಸುತ್ತಾ, ಅವನ ಷರ್ಟಿನ ಗುಂಡಿಯನ್ನು ಸರಿಮಾಡಲು ಶುರುಮಾಡಿದಳು. ಒಂದೊಂದು ಸಾರಿ ಬಲಗಾಲಿನ ಚಪ್ಪಲಿಯನ್ನು ಕಳಚಿ, ಉಂಗುಷ್ಟದಿಂದ, ಎಡ ಗಾಲನ್ನು ಪಾಯಿಜಾಮ ಮೇಲಿನಿಂದಲೇ ಕೆರೆದುಕೊಳ್ಳುವಳು. ತಿರುಗಿ ರಂಗು ರಂಗಿನ ಚಪ್ಪಲಿಗೆ ಪಾದವನ್ನು ತೂರಿಸುವಳು. ಎರಡು ನಿಮಿಷಕ್ಕೊಮ್ಮೆ ನನ್ನ ಕಡೆಗೆ, ಒಂದು ನಿಮಿಷಕ್ಕೊಮ್ಮೆ ಮಾಸಪತ್ರಿಕೆಯಿಂದ ಮುಚ್ಚಿದ್ದ ರಾವ್ ಬಹದ್ದೂರರ ಕಡೆಗೆ ಚಂಚಲದೃಷ್ಟಿಯನ್ನು ಹಾಯಿಸುತ್ತಿದ್ದಳು.

ಈ ಯಮ್ಮ ಯಾಕೆ ಹೀಗ್ಮಾಡ್ತಾಳೆ. ಈಕೇಗೆ ಏನು ಬೇಕು? ಹಾಡೇ ಹಗಲು ಇನ್ನೊಬ್ಬರ ಮನೆಗೆ, ಅದೂ ಮಗನ್ನ ಕರಕೊಂಡು ಯಾಕೆ ಬಂದಳು?

ಬಂದವಳು ಮಾತನಾಡದೆ ಕುರ್ಚಿಯ ಮೇಲೆ ಕುಳಿತು, ಮಿಕಿ ಮಿಕಿ ಯಾಕೆ ನೋಡ್ತಾ ಇದ್ದಾಳೆ? ಇದರ ಮರ್ಮ ಏನಿರಬಹುದು? ನನ್ನ ಹೆಂಡತಿಯನ್ನು ಏನಾದರೂ ಭೇಟಿಯಾಗುಕ್ಕೆ ಬಂದಿದ್ದಾಳೆಯೇ? ನನ್ನ ಹೆಂಡತಿಗೋ ಈ ಸಮಾಜದ ಗೀಳು ಹೆಚ್ಚು. ಅಲ್ಲಿಗೆ ಹೋಗಿ ಎಂತೆಂತಹಾ ಹೆಂಗಸರನ್ನೆಲ್ಲಾ ಪರಿಚಯಮಾಡಿ ಕೊಳ್ಳುತ್ತಾಳೆ. ಅದರಲ್ಲೂ ದುಡುಮಿಯರಾಗಿದ್ದರೆ ಮನೆಗೆ ಕರೆಯುತ್ತಾಳೆ. "ಕುಂಬಳಕಾಯಿ ಇದ ಹಾಗೆ ಇದ್ದಿ ಅಂತ ನನ್ನ ಹಾಸ್ಯ ಮಾಡ್ತೀರಲ್ಲ! ಬೂಸಕ್ಕ ಅಂತ ಅಡ್ಡ ಹೆಸರುಇಟ್ಟಿದ್ದೀರಲ್ಲಾ! ನನ್ನ ಸ್ನೇಹಿತೆಯರನ್ನು ನೋಡಿ. ನನಗಿಂತ ಚಿಕ್ಕವರು. ಒಂದು ಎರಡು ಮಕ್ಕಳು. ಆದರೂ ಸೋರೆ ಬುರುಡೆಗಳು ತೇಲುವ ತರಹ, ಗಾಳೀಲಿ ತೇಲಿಕೊಂಡೇ ಬೆಲೂನ್ ತರಹ ಬರ್‍ತಾರೆ."—ಎಂದು ನನಗೆ ಹೇಳಿ, ತನ್ನ ಕೋಮಲಾಂಗತೆಯನ್ನು ಹೊಗಳಿಕೊಳು ತ್ತಾಳೆ. ಆ ತರಹ ಇದೂ ಒಂದೇನೋ? ಆದರೆ ಹೆಂಡತಿ ತೌರಿಗೆ ಹೋಗಿ ಒಂದು ವಾರ ಆಯ್ತು. ಆಕೆ ಯಾವುತ್ತೋ ಕರೆದರೆ ಇವತ್ತು ಈಕೆ ಬಂದರೆ ನಾನೇನು ಮಾಡಲಿ? ಬಂದೋಳು ಕೇಳಬಾರದೆ? ಅಮ್ಮಾವರು ಎಲ್ಲಿ ಅಂತ; ಎಂದು ಯೋಚಿಸುತ್ತಾ ಇದ್ದೆ.

ಮನೆಗೆ ಬಂದ ಮುತ್ತೈದೆಯನ್ನು ಯಾಕೆ ಬಂದ್ರಿ ಅಂತ ಕೇಳುವುದು ಸಭ್ಯರ ಲಕ್ಷಣವಲ್ಲ. ಹಾಗೂ ಪರಸ್ತ್ರೀ, ಅಪರಿಚಿತ ಸ್ತ್ರೀ ನಾನೇ ಮೇಲೆ ಬಿದ್ದು ಕೊಂಡು ಹೋಗಿ, ಯಾರಮ್ಮಾ! ನೀವು, ನನ್ನಿಂದ ಏನು ಬೇಕಾಗಿತ್ತು ಎಂದು ಕೇಳುವುದು ನಾಗರಿಕತೆಯ ಕುರುಹಲ್ಲ. ಆಕೆಯೇ ಕೇಳಲಿ. ಅಥವಾ ಗಂಡ ಹಿಂದಿನಿಂದ ಬರ್‍ತಾ ಇದಾನೇನೋ? ಅವನು ಬಂದಮೇಲೆ ಮಾತನಾಡಬಹುದು, ಎಂದುಕೊಂಡು ತೆಪ್ಪಗೆ ಕುಳಿತೆ.

ಅಷ್ಟರಲ್ಲೇ ಆ ಮಗು ಅತ್ತಿತ್ತ ಓಡಾಡಹತ್ತಿತು. ನನ್ನ ಹತ್ತಿರಕ್ಕೆ ಬಂದು ತಿರುಗಿ ಓಡಿಹೋಯಿತು. ಅಮ್ಮನ ಹತ್ತಿರಕ್ಕೆ ಹೋಯಿತು. ತಿರುಗಿ ರಾವ್ ಸಾಹೇಬರ ಬಳಿಗೆ ಓಡಿತು. ಅಪ್ಪಾಲೆ ತಿಪ್ಪಾಲೆ ಸುತ್ತಿತು. ಒಂದು ನಿಮಿಷ ತೆಪ್ಪಗೆ ನಿಂತುಕೊಂಡಿತು. ನೋಡ್ತಾ ಇದ್ದೆ.

ಆಗ ಕಾಣಿಸಿತು. ಅದರ ಷರ್ಟಿನ ಮೇಲೆ ಬಲಭಾಗದಲ್ಲಿ ಒಂದು ಚಿಕ್ಕ ಚೇಳು? ಯಾವ ಮಾಯದಲ್ಲಿ ಈ ಚೇಳು ಆ ಮಗುವಿನ ಮೈಮೇಲೆ ಹತ್ತಿತು? ಸೋಫಾ ಪಕ್ಕದಲ್ಲಿ ನಿಂತಿದ್ದಾಗ ಬೂಡ್ಸುಕಾಲಿನ ಮೇಲೇರಿ ಹರಿದು ಬಂದಿದ್ದಿರ ಬಹುದು? ತಿಳಿಯದ ಮಗು! ಚೇಳು ಕುಟಿಕಿದರೆ? ಮಾನ ಮರ್ಯಾದೆ ಎಲ್ಲವನ್ನೂ ಬಿಟ್ಟು "ಚೇಳು! ಚೇಳು ಅಮ್ಮಾ! ಮಗುವಿನ ಎದೆಮೇಲೆ" ಎಂದು ಕೂಗುತ್ತಾ ಮಗುವಿನ ಬಳಿಗೆ ದೈನಂದಿನ ಪತ್ರಿಕೆಯನ್ನು ಸುರಳಿ ಸುತ್ತಿ ಹಿಡಿದು ಓಡಿದೆ.

ನಾನು ತರಿಸುವ ದೈನಂದಿನ ಪತ್ರಿಕೆ ಬಲು ಉತ್ಕೃಷ್ಟವಾದುದು. ಕಸಪರಿಕೆ ಯಲ್ಲೇ ಅದರ ಕಾಗದವನ್ನು ಮಾಡುತ್ತಾರೆ ಎಂದು ನನ್ನ ನಂಬಿಕೆ. ಆ ಪತ್ರಿಕೆ

ಯಲ್ಲಿ ಯಾರ ಹೆಸರು ಸಿಕ್ಕಿಹಾಕಿಕೊಂಡರೂ, ಅವರ ಮುಖಕ್ಕೆ ನೀವಾಳಿಸಿದ ಮಹಾ ಮಂಗಳಾರತಿ ಆಗುವುದು ಖಚಿತ. ಅಂತಹಾ ಶಕ್ತಿಯುತ ಪತ್ರಿಕೆಯನ್ನು ಸುರಳಿ ಸುತ್ತಿ ಝಾಡಿಸಿದರೆ ಎಂತಹ ಚೇಳಿರಲಿ, ಬಿದ್ದು ವಿಲಿ ವಿಲಿ ಒದ್ದಾಡಿ ಸಾಯಲೇ ಬೇಕು. ಚೇಳೇನು ಬಂತು. ಕಡೆಗೆ ಹಾವು, ನಾಗರಹಾವು ಕೂಡ, ಈ ಪತ್ರಿಕೆಯ ವಿಷದ ಎದುರಿಗೆ ಸುಸ್ತು.

ಧೈರ್ಯದಿಂದ ಓಡಿ, ಪತ್ರಿಕೆಯ ಸುರಳಿಯಿಂದ ಮಗುವಿನ ಷರ್ಟಿನಮೇಲಿದ್ದ ಚೇಳನ್ನು ಝಾಡಿಸಿದೆ. ನೋಡಿದೆ. ಚೇಳು ಅಲ್ಲೇ ಇತ್ತು. ಗಟ್ಟಿಯಾಗಿ ಕಚ್ಚಿಕೊಂಡೇ ಇತ್ತು.

ಆದರೆ ಈ ಗಲಾಟೆಯಲ್ಲಿ ರಾವ್ ಸಾಹೇಬರು ಸೋಫಾದ ಕೈಹಿಡಿಯಮೇಲೆ ಹಾರಿ ನಿಂತಿದ್ದರು. ಗಾಬರಿಯಾಗಿ ಇತ್ತ ಅತ್ತ ಸುತ್ತ ನೆಲವನ್ನು ನೋಡುತ್ತಿದ್ದರು. "ಹೆದರಿಕೆಯೇ ಇಲ್ಲ ನನಗೆ. ನಿನಗೆ ಹೆದರಿಕೆಯಾದರೆ ಧೈರ್ಯ ತಂದುಕೋ, ಏನು ಬಂದರೂ ಎದುರಿಸ್ತೀನಿ." ಇದೆಲ್ಲಾ ಹೇಳಿದ ರಾವ್ ಸಾಹೇಬರು ತ್ರಿಶಂಕುವಿನಂತೆ, ಉಂಗುಷ್ಟದಮೇಲೆ ನಿಂತಿದ್ದರು.!

ಆ ಮಹಾತಾಯಿ! ಸ್ವಲ್ಪವಾದರೂ ಬೆದರಬೇಕಲ್ಲ. ತೂಕ ಹೆಚ್ಚಾಗಿ ಏಳುಕ್ಕಾಗದೆ ಹಾಗೆ ಕೂತೇ ಇದ್ದಳೋ? ಅಥವಾ ಕೂತಮೇಲೆ ಸಾವಧಾನವಾಗಿ ಹರಡಿಕೊಂಡು, ಕುರ್ಚಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಳೋ? ದೇವರೇ ಬಲ್ಲ!

ಹೆದರುವುದು ಹಾಗಿರಲಿ, ನಗ್ತಾ ಇದ್ದಳು. ಪತ್ರಿಕೆಯಿಂದ ಝಾಡಿಸಿದ ಕೂಡಲೇ ಮಗುವು ಅಮ್ಮನ ಹತ್ತಿರಕ್ಕೆ ಓಡಿತು. ಮಗುವಿನ ಎದೆಯನ್ನು ತಡವರಿಸುತ್ತ, ಆ ಚೇಳನ್ನು ತಡವರಿಸುತ್ತ, ಆಕೆ ಹೇಳಿದಳು "ಇದು ಆಟದ ಚೇಳು, ಪ್ಲಾಸ್ಟಿಕ್‌ದು, ಪಿನ್‌ತರಹ ಹಾಕಿದ್ದೀನಿ. ನೋಡೇ ಇಲ್ಲವೇ ಇಂತಹದನ್ನ" ಅಂತ ಅಚ್ಚ ಕನ್ನಡದಲ್ಲಿ ಹೇಳಿದಳು.

ಬೆರಗು ಬೆರಗಾಗಿ ಬಾಯಿ ಬಿಟ್ಟುಕೊಂಡು ನೋಡುತ್ತಿದ್ದೆ. ಪಂಜಾಬಿ ಪೈಜಾಮಾ ಹಾಕಿದ ಹುಡುಗಿ ಅಚ್ಚ ಕನ್ನಡ ಮಾತನಾಡುವುದು, ಅಲಂಕಾರಕ್ಕೆ ಚೇಳನ್ನು ಉಪಯೋಗಿಸುವುದು; ಇವು, ಅವರು ಯಾಕೆ ನಮ್ಮನೆಗೆ ಬಂದರು ಎನ್ನುವುದನ್ನು ಮರೆಸಿತು. ನನ್ನ ಮುಖದ ಪ್ರಶ್ನಾರ್ಥ ಚಿಹ್ನೆಯನ್ನು ಕಂಡ, ಆಕೆ ಹೇಳಿದಳು. "ಈ ಊರಿಗೆ ನಾವು ಬಂದು ೧೫ ವರ್ಷಗಳಾಯ್ತು. ಹಪ್ಪಳ ಒತ್ತಿ ಮಾರಿ ಜೀವನ ನಡೆಸುತ್ತಿದ್ದೇವೆ. ಕಾರಣ ಕನ್ನಡವನ್ನು ಚೆನ್ನಾಗಿ ಕಲಿತುಕೊಳ್ಳ ಬೇಕಾಯ್ತು. ನಾಗರಹಾವಿನ ಮಾದರಿಯ ಒಡವೆಗಳನ್ನೂ ತಲೆಗೆ ತೋಳಿಗೆ, ಸೊಂಟಕ್ಕೆ ನೀವು ಹಾಕಿಕೊಳ್ಳಲ್ಲವೇ? ಹಾಗೆ ಚೇಳನ್ನೂ ದೃಷ್ಟಿಪರಿಹಾರಕ್ಕೆ ಹಾಕ ಬಾರದೇ? ಎಂದು ಕಿಲಕಿಲ ಮಾಡಿದಳು.

ರಾವ್ ಸಾಹೇಬರು ಸೋಫಾದ ಹಿಡಿಯ ಮೇಲಿಂದ ಕೆಳಕ್ಕಿಳಿದಿದ್ದರು ಸೋಫಾದ ಪಕ್ಕದಲ್ಲೇ ನಿಂತಿದ್ದರು. ಹಣೆ ಒರೆಸಿಕೊಂಡು ಇನ್ನೇನು ಕುಳಿತು ಕೊಳ್ಳಬೇಕು. ಅಷ್ಟು ಹೊತ್ತಿಗೆ ರಂಗ ಮನೆಯೊಳಗಿಂದ ಬಂದ. "ಸೋಮಿ ಯಾರೋ ಫೋನ್ ಮಾಡ್ತಾ ಇದ್ದಾರೆ. ಅದೇನೋ ಹೆಸರು ಹೇಳಿದರು, ಸರಿ ಯಾಗಿ ಕೇಳಿಸಲಿಲ್ಲ" ಎಂದು ಹೇಳಿದ.

ಮನೆಯೊಳಕ್ಕೆ ಹೋದೆ. ರಾವ್ ಸಾಹೇಬರು ಮತ್ತು ಆಕೆ ನನ್ನನ್ನೇ ನೋಡುತ್ತಿದ್ದರು. ಫೋನ್ ತೆಗೆದುಕೊಂಡೆ. "ರಾಯರೇ! ಡಾ|| ದಂತೋಬ ರಾವ್ ಮಾತನಾಡ್ತಾ ಇರೋದು. ಮೊನ್ನೆ ನನ್ನ ಹೊಸ ದವಾಖಾನೆಗೆ ಬೋರ್ಡನ್ನು ಬರೆದುಕೊಡಲು ತಮ್ಮಯ್ಯನ ಅಂಗಡಿಗೆ ಹೇಳಿ ಕಳಿಸಿದ್ದೆ. ಇವತ್ತು ಅವನು ಬಿಲ್ ಕಳಿಸಿದ. ಬೋರ್ಡನ್ನೇ ಕಳಿಸದೆ, ಬಿಲ್ ಕಳಿಸಿದೆಯಲ್ಲಾ ಎಂದು ಫೋನ್ ಮಾಡಿ ಕೇಳಿದರೆ, ನಿನ್ನೆ ರಾತ್ರಿಯೇ ನಿಮ್ಮ ಮನೆಯ ಗೇಟಿನ ಬಳಿ ನೇತುಹಾಕಾಯಿ ತಲ್ಲ ಎಂದ. ಇಲ್ಲವಲ್ಲಯ್ಯಾ ಆ ಬೋರ್ಡು ಎಂದೆ. ಆ ಮೇಲೆ ಅನುಮಾನ ಬಂತು. ನಿಮ್ಮನೆ ಗೋಡೇಗೆ ನೇತುಹಾಕಿಬಿಟ್ಟಿದಾನೇನೋ ಅಂತ" ಎಂದು ಹೇಳಿದರು.

"ತಡೀರಿ ನೋಡಿಕೊಂಡು ಬಂದು ಹೇಳ್ತೀನಿ" ಎಂದು ಹೇಳಿ ಬೈಠಕ್ ಖಾನೆಗೆ ಹೋಗಿ, ಈ ಮನೆಯೊಳಕ್ಕೆ ಬರುವುದಕ್ಕೆ ಮುಂಚೆ ಹೊಸ ಬೋರ್ಡು ನೋಡಿದಿರಾ ಎಂದು ಕೇಳಿದೆ. ದುಡುಮಿಯೂ, ರಾವ್ ಸಾಹೇಬರೂ ಒಂದೇ ಧ್ವನಿಯಲ್ಲಿ ಹೇಳಿದರು. ಡಾ|| ದಂತೋಬರಾವ್ ಅಂತ ದೊಡ್ಡ ಬೋರ್ಡಿತ್ತು. ಈ ಮನೆಗೆ ಬಂದಿದ್ದಾರೆ ಅಂತ ಇಲ್ಲಿಗೆ ಬಂದೆವು, ಎಂದು.

ರಂಗನ್ನ ಕರೆದು, ಇನ್ನು ಯಾರಾದರೂ ನುಗ್ಗಿ ಬರುವ ಮೊದಲೇ ಆ ಬೋರ್ಡನ್ನು ಕಿತ್ತು ಡಾ|| ದಂತೋಬರಾಯರ ಹೊಸ ದವಾಖಾನೆಗೆ ಕೊಟ್ಟು ಬಾ ಎಂದು ಹೇಳಿದೆ.

—ಪ್ರಕಾಶ್.

ಚೆಂದುಳ್ಳಿ ಹುಡುಗಿ ಅವಳ ಹೆಸರು ಕಮಲ
ಮಂಚದೊಳು ಮಲಗಿರಲು ಇಲಿ ಹೂಡಿತು ಗಲಬಿಲ
ಅರೆನಿದ್ದೆಯಲ್ಲಿಯೇ
ಹೊರಳಿದಳು ಬಾಲೆ
ಹೊರಳಿ ಕನವರಿಸಿದಳು "ಬಂದೆಯಾ"

ದಿಳ್ಳಿಯಲ್ಲಿ ಹಿಂದೊಮ್ಮೆ

ಹಿಂದೂಗಳ ಪಕ್ಷಪಾತಿ. ದಾರಾಷುಕೋ, ಉಪನಿಷತ್ತುಗಳನ್ನು ಭಾಷಾಂತರಿಸಿದ್ದಾನೆ ಎಂದು ಶಾಸ್ತ್ರಂಧರನು ಕೆರಳಿಸಿ, ಅವನ ಮೇಲೆ ಬಿದ್ದು ಅವನು ಇಲ್ಲದಂತೆ ಮಾಡಿ,

ಷೂಜ ಸುನ್ನಿಗಳ ಪಕ್ಷಪಾತಿ, ಮತಭ್ರಷ್ಟ ಎಂದು ಅಪವಾದ ಹೊರಿಸಿ ಅವನು ತಲೆ ತಪ್ಪಿಸಿಕೊಂಡು ಹೋಗುವಂತೆ ಮಾಡಿ.

ಮುರಾದನ ಬೆಂಬಲ ಪಡೆದು, ಆನಂತರ "ನೀನು ಜಾತಿ ಭ್ರಷ್ಟ ಷರಾಬು ಸೇವಿಸುತ್ತಿ, ರಾಜನಾಗಲು ಅನರ್ಹ" ಎಂದು ಅವನನ್ನು ಕೊಲೆ ಮಾಡಿ

ಫಕೀರನು ನಾನು ಎಂದು ಹೇಳಿಕೊಂಡ ಅವರಂಗಜೇಬನು, ಆಲಂಘೀರ್ ಎಂದು ಬಿರುದು ಹೊತ್ತು ದಿಳ್ಳಿಯ ಪಟ್ಟಕ್ಕೇರಿದ.

ಈಗ

ಮುಸ್ಲಿಮರ ಪಕ್ಷಪಾತಿ ಎಂದೊಬ್ಬ ನಾಯಕರಿಗೆ ಅಪವಾದ ಹೊರಿಸಿ—
ಶ್ರೀಮಂತರ ಕೈಗೊಂಬೆ ಎಂದೊಬ್ಬರ ಹೆಸರಿಗೆ ಮಸಿ ಹಚ್ಚಿ—
ಚೀಣೆಯರ ಪರ ಮುಗುಮ್ಮಾಗಿ ವ್ಯವಹರಿಸುತ್ತಾನೆ ಎಂದು ಸುದ್ದಿ ಹಬ್ಬಿಸಿ—
ಪಾಕೀಸ್ಥಾನದಲ್ಲಿ ಒಂದು ಕಾಲಿಟ್ಟಿದ್ದಾನೆ ಎಂದೊಬ್ಬನನ್ನು ಮೂದಲಿಸಿ—
ಸ್ವಜನ ಪಕ್ಷಪಾತಿ ಎಂದೊಬ್ಬ ನಾಯಕನಿಗೆ ಅಡ್ಡ ಹೆಸರಿಟ್ಟು—
ವಾಮ ಪಕ್ಷೀಯ ಎಂದೊಬ್ಬನನ್ನು ಬೈದು ಅಂದು ಹೊಡಿಸಿ—
ಹಿಂದಿಯೇತರ ಎಂದೊಬ್ಬ ನಾಯಕನನ್ನು ಕೊಟ್ಟಿಗೆಯಲ್ಲಿ ಕಟ್ಟಿ—
ಹಿಂದಿ ಪ್ರೇಮಿ ಎಂದೊಬ್ಬ ನಾಯಕನನ್ನು ಅಟ್ಟದಲ್ಲಿ ಕೂರಿಸಿ—
ಅಮೆರಿಕನ್ನರ ಸೂತ್ರದ ಬೊಂಬೆ ಎಂದೊಬ್ಬನಿಗೆ ಹೆಸರಿಟ್ಟು—
ಬ್ರಿಟಿಷಿನವರ ಕಾಣದ ಬಾಲ ಎಂದೊಬ್ಬನನ್ನು ಅಂದು—

ಯಾವ ಅವರಂಗಜೇಬ ಫಕೀರನ ವೇಷದಲ್ಲಿ ತೆರೆ ಮರೆಯಲ್ಲಿ ಆಟವಾಡುತ್ತಿದ್ದಾನೋ ದೇವರೇ ಬಲ್ಲ ಸದ್ಯಕ್ಕೆ ಕಣಿ ಹೇಳಲು ಬಾರದು, ಎಂದಳು ಕೊರವಂಜಿ.

ಸಾಧು ಸಮಿತಿ

[ಭಾರತ ಸಾಧು ಸಮಾಜದವರು ಭ್ರಷ್ಟಾಚಾರದ ವಿರುದ್ಧ ಚಳುವಳಿ ಹೂಡುತ್ತಾರಂತೆ.]

ಕಾವಿಶಾಟಿಯ ಹೊದ್ದು
ಬರುತಾನೆ ಗುಮ್ಮಯ್ಯ
ಮಾಡದಿರು ನೀ ಸದ್ದು
ಹಾಕುವೆನು ದಮ್ಮಯ್ಯ

ಮೋಜ ಕೆಳಗೊಡ್ಡದಿರು ಕೈಯ
ಸಿಕ್ಕಿ ಬಿದ್ದರೆ ಬಲು ಬಿರಸು ಶಾಪ
[ದುಡಿ ನೀ ಮುಂದು ನಿನ್ನ ಮೈಯ್ಯ]
ಬೇಡ ಸುಮ್ಮನೆ ಋಷಿ ಶಾಪ.

ಅತ್ತ ಮಗು ಗಪ್ಪ ಮಲಗಿತೇ
ಬಾರದ ಬೈರಾಗಿಗೆ ಹೆದರಿ ?
ಆದರೀಗ ಬಂದೇ ಬರುವ ನವ
ಕೆಂಗಣ್ಣ, ತಲೆಗೂದಲ ಬಿಂಗೆದರಿ.

ರುದ್ರಾಕ್ಷಿ, ವಿಭೂತಿ, ತ್ರಿಶೂಲ—
ಕೆಣಕದಿದ್ದರೇನೇ ಬಲು ಅನುಕೂಲ
ಜೋಕೆ! ಬರುತಿಹುದು ಬಿ ಎಸ್ ಸಗಣ
ಸದಾಚಾರದ ಮಂತ್ರ ಮಣ ಮಣ

ಕೊಡಲಾರದ ಗಿರಾಕಿಗೋ ಬಲು ಖುಷಿ—
ಕಸಿಯಲಾರದವನಿಗೊಂದು ನೈತಿಕ ನೆಲೆ
ಹೇ, ನಂದಾ! ಕೊಂಚ ನೀ ನಿಗಾ ಮಡಗು
ಆಗದಿರಲಿ ಸಾಧುತಂಡ ಸ್ವಾರ್ಥದ ಪಿಡಗು.

—ಎಂ. ಎಸ್. ಕೆ.

ಚಪಾತಿ ಯಂತ್ರದಿಂದ ಚಿತ್ರಾನ್ನದವರೆಗೆ

ಯುಗಾದಿಯ ದಿನ ಬೆಳಗ್ಗೆ ಪ್ರಾಣೇಶ ಜೋಲುಮೋರೆ ಹಾಕಿಕೊಂಡು ಕುಳಿತಿದ್ದನ್ನು ಕಂಡು ಹೇಗೆ ಹೇಗೋ ಆಯಿತು. ಯಾರೋ ಈತನಿಗೆ ಬರೀ ಬೇವು ತಿನ್ನಿಸಿರಬೇಕು ಎಂದುಕೊಂಡೆ. 'ಹೌದೇನೋ?' ಅಂತ ಕೇಳಿಯೂ ಕೇಳಿದೆ.

"ಹಾಗೇನಿಲ್ಲಪ್ಪ. ಯಾರೋ ಒಬ್ಬ ಪುಣ್ಯಾತ್ಮ ರಾಶಿ ರಾಶಿ ಚಪಾತಿಗಳನ್ನು ತಯಾರಿಸೋ ಯಂತ್ರವನ್ನು ಕಂಡುಹಿಡಿದಿದ್ದನಲ್ಲ. ಈಗ ಇನ್ನು ಯಾರೋ ಒಬ್ಬನು ಆ ಯಂತ್ರ ಉಪಯೋಗವಿಲ್ಲದ್ದು ಅಂತ ಕಂಡುಹಿಡಿದಿದಾನಂತೆ" ಎಂದು ತೊಡಗಿದ ಪ್ರಾಣೇಶ.

"ಸಾಕು ಸುಮ್ನಿರು....ಇನ್‌ಕಂಟ್ಯಾಕ್ಸ್ ನೋಟೀಸು ಬಂದಿರಬೇಕು, ಅಥವಾ ಸಿ.ಡಿ.ಎಸ್.ಗೆ ಭರ್ತಿಮಾಡು ಅಂತ ಬಂದಿರಬೇಕು. ಅದಕ್ಕೇ ಈ ಸಪ್ಪೆ ಮೋರೆ."

ಇಲ್ಲಪ್ಪಾ ಚಪಾತಿ ಯಂತ್ರಗಳದ್ದೇ ಚಿಂತೆ. ಮಹಾ ಮಹಾ ಪ್ರತಿಭಾಶಾಲಿಗಳಿರುವ ದೇಶ ನಮ್ಮದು. ಹೊಸ ಹೊಸದು ಕಂಡು ಹಿಡಿತಲೇ ಇರ್ತಾರೆ. ಪ್ರಯೋಗಗಳನ್ನ ನಡಸ್ತಲೇ ಇರ್ತಾರೆ. ವಿದ್ಯಾಕ್ಷೇತ್ರದಲ್ಲಿ, ವಾಣಿಜ್ಯ ಕ್ಷೇತ್ರದಲ್ಲಿ, ವಿಜ್ಞಾನ ಕ್ಷೇತ್ರದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ, ಕಾನೂನಿನ ಕ್ಷೇತ್ರದಲ್ಲಿ...."

"ಸಾಕು ಮಾಡಪ್ಪ ನಿನ್ನ ಕ್ಷೇತ್ರಗಳ ಸಮಾಚಾರ ಹೊಸ ಹೊಸದನ್ನು ಕಂಡು ಹಿಡಿಯೋದರಲ್ಲಿ ನಮ್ಮವರದು ಎತ್ತಿದ ಕೈ ಅಂತ ನೀನು ಒಪ್ಪಿಕೊಂಡೆಯಲ್ಲ, ಅಷ್ಟೇ ಸಾಕು. ಚಪಾತಿಯಂತ್ರಕ್ಕೆ ಅಂಬರ್ ಚರಕಾದ ಗತಿ ಬಂದರೆ ಬರಲಿ, ಚಿಂತೆಯಿಲ್ಲ. ಇಲ್ಲಿ ನೋಡು; ಮದರಾಸ್ ಅಸೆಂಬ್ಲಿಯ ಸ್ವತಂತ್ರ ಪಕ್ಷದ ಧುರೀಣ ಸಾ॥ ಗಣೇಶನ್ ಎಂಬವರಿಗೆ ಒಂದು ಹೊಸ ಹೊಸ ಯೋಚನೆ ಹೊಳೆದಿದೆ ನೋಡು."

"ಆತ ಏನಾದರೂ ಇಡ್ಲಿ ಮಿಶೀನು ಕಂಡುಹಿಡಿದನೆ?"

"ಮೆಶೀನ್ ಗಿಶೀನ್ ಅಲ್ಲವೋ. ಆತನದು ಒಂದು ಪ್ಲಾನು ಅಷ್ಟೆ. ಹಿಂದುಳಿದವರನ್ನು ಮುಂದೆ ತರೋದಕ್ಕೆ ಒಂದು ಸಾಧನ ಅಷ್ಟೆ."

"ಸಾಧನ....ಅಂದರೆ ಒಂದೇ ಸಮನೆ ಮುಂದಕ್ಕೋಡುವ ಎಕ್ಸ್‌ಪ್ರೆಸ್ ಗಾಡಿ ತರಹ ಏನಾದರೂ?"

"ಹುಚ್ಚು ಹುಚ್ಚು ಆಡಬೇಡ ಮೆಶೀನೂ ಅಲ್ಲ ಎಕ್ಸ್‌ಪ್ರೆಸ್ ಗಾಡಿಯೂ ಅಲ್ಲ ಒಂದು ಪ್ಲಾನು ಮಾತ್ರ. ಹುಡುಗ ಹುಡುಗಿ ತಮ್ಮ ಜಾತಿಯವರನ್ನು ಮದುವೆಯಾಗಲೇಕೂಡದು. ಬೇರೆ ಜಾತಿಯವರನ್ನೇ ಮದುವೆಯಾಗಬೇಕು. ಅಂತ."

"ಮಿಶ್ರ ವಿವಾಹ ಅನ್ನು. ಅದೇನೂ ಹೊಸತಲ್ಲವಲ್ಲ?"

" ಮಿಶ್ರ ವಿವಾಹ ಹೊಸತಲ್ಲ ಕಣೋ. ಆದರೆ ಹುಡುಗ ಹುಡುಗಿ ಜಾತಿಯೊಳಗಿಂದಲೇ ಮದುವೆಯಾಗುವುದು ಕೂಡದು. ಅನ್ನೋದರಲ್ಲಿ ಹೊಸತನ ಇರೋದು ಮಾತ್ರವಲ್ಲ ಹಾಗಂತ ಸರಕಾರ ಕಾನೂನು ಮಾಡಬೇಕು ಅನ್ನೋದರಲ್ಲಿರೋದು ಹೊಸತನ. ಹಾಗೆ ಮಾಡಿದರೆ ಇನ್ನೂ ಕೆಲವು ವರ್ಗಗಳ ಮೇಲೆ ಹಿಂದುಳಿದವರು ಮುಂದಿನವರು ಅಂತ ಭೇದವೇ ಇರೋಲ್ಲ. ಅಂತಾರೆ ಸಾ|| ಗಣೇಶನ್.

" ಭೇಷ್ .. ಅವರ ಹೊಟ್ಟೆ ತಣ್ಣಗಿರಲಿ, ಬಟ್ಟೆ ರೆಂಲಿನ್ ಆಗಿರಲಿ .. ಆದರೆ ಪ್ರಾಣಿದಯಾ ಸಂಘದವರು ಅವರ ಯೋಜನೆಯಿಂದ ಸ್ಫೂರ್ತಿ ಪಡೆಯದಿದ್ದರೆ ಸಾಕು ಸದ್ಯ !"

" ಯಾಕಂತೀಯ ?"

ಪ್ರಾಣಿಗಳನ್ನ ಮನುಷ್ಯರ ಲೆವೆಲ್ಗೆ ತರೋದಕ್ಕೆ ಸಾ|| ಗಣೇಶನ್‌ಗಿಂತ ಅವರು ಒಂದು ಹೆಜ್ಜೆ ಮುಂದೆ ಹೋದರೆ?

ಏನೇ ಇರಲಿ ಚಪಾತಿ ಮೆಶೀನ್, ಅಂಬರ್ ಚರಕಾ ಯೋಜನೆಗಳಿಗಿಂದ ಇದೇ ವಾಸಿ. ಇಂತಹ ಯೋಜನೆಗಳಲ್ಲಿ ದುಡ್ಡು ವ್ಯರ್ಥವಾಗಿ ತೆರಿಗೆ ಹೆಚ್ಚಾಗುವ ಅಪಾಯವಿಲ್ಲ ಕಾನೂನು ಮಾಡುಕ್ಕೆ ಕಾಸು ಬೇಕೆ? ಮೆಜಾರಿಟಿ ಇದ್ದರೆ ಸಾಕು. ಕಾನೂನನ್ನ ಪಾಲಿಸಬೇಕು ಅಂತ ಸ್ವತಂತ್ರ ದೇಶದ ಸ್ವತಂತ್ರ ಪಕ್ಷದ ಧುರೀಣನ ಒತ್ತಾಯವಿರಲಾರದು....." ಅಂತ ಪ್ರಾಣೇಶ್ ಏನೇನೋ ಹೇಳುತ್ತಲೇ ಇದ್ದ.

ಅಷ್ಟರಲ್ಲಿ ಒಳಗಿಂದ ಬಂದು ಮೇಜಿನಮೇಲೆ ಕುಳಿತ್ತಿದ್ದ ಚಿತ್ರಾನ್ನದ ತಟ್ಟೆಯಿಂದ ಕಡಲೆಕಾಳು ಆರಿಸಿ ಬಾಯಿಗೆಸೆದುಕೊಳ್ಳುತ್ತ ನಾನು ಹು .. ಹು.... ?" ಅನ್ನುತ್ತಲೇ ಇದ್ದೆ.

—ರಾಮಿ.

ಒಂದು ಊರಿನಲ್ಲಿ ಒಬ್ಬ ಹೆಂಗಸಿದ್ದಳು
ಕೆಳ್ಳಗಿದ್ದ ಅವಳಿಗಿತ್ತು ಬಿಲ್ಲು ಕಾಲು !
ಒಲವಿನಿಂದ ಮಗುವನೆತ್ತಿ
ತೊಡೆಯಮೇಲೆ ತುಳಿಸಲಾಗ
ದೊಪ್ಪಂತ ಬಿತ್ತು ಮಗುವು, ನೆಲದಮೇಗಡೆ
ಗಂಧರ್ವನೊಬ್ಬನ್ನೊಮ್ಮೆ ಹಾಡುತ್ತಿದ್ದನು
ಚೆಂದವದನೆ ಅಪ್ಸರೆಯು ಕುಣಿಯುತ್ತಿದ್ದಳು.
ಕೊರಳು ಕಾಲು ಜೋಡಿಯಾಡಿ
ಸೊಂಟಗಂಟಲಂತೆ ಬಳುಕಿ
ಕಡೆಗೆ ಇಬ್ಬರೂನೂ ಸುಸ್ತಾಗಿ ಬಿದ್ದುಕೊಂಡರು.

ಹರಿಣಾಕ್ಷಮ್ಮನ ಹೇರ್ ಡ್ರೈಯಿಂಗ್

ಪೇಪರ್ ಜಾಹಿರಾತನ್ನು ಒಂದೇ ಸಮ ನೋಡುತ್ತಿದ್ದ ಹರಿಣಾಕ್ಷಮ್ಮ ಒಮ್ಮೆಗೇ ಎಚ್ಚತ್ತು ಏನೋ ಧೃಡ ನಿರ್ಧಾರ ಮಾಡಿಕೊಂಡು ಎದ್ದರು. ಸ್ನಾನ ಮುಗಿಸಿ ಎದುರಿಗೆ ಬಂದ ರಾಯರನ್ನು ಓರೆ ನೋಟದಿಂದ ನೋಡಿ ಕತ್ತು ಕೊಂಕಿಸಿದರು. ರಾಯರು ಸ್ವಲ್ಪ ತತ್ತರಿಸಿದರೂ, ಧೈರ್ಯವಾಗೇ ಹೆಂಡತಿಯನ್ನು ಕೇಳಿದರು. "ಏನು ಹರಿಣಾ ಬಹಳ ಖುಷಿಯಾಗಿದ್ದೀಯಲ್ಲಾ? ಎಂದೂ ಇಲ್ಲದ್ದು ಇವತ್ತು (ಅದೂ ತಿಂಗಳ ಕೊನೆಯಲ್ಲಿ) ನನ್ನನ್ನು ಇಷ್ಟು ಪ್ರೀತಿಯಿಂದ ನೋಡ್ತಿದೀಯಾ? ಏನು ಸಮಾಚಾರ? ಚೀಟಿ ಗೀಟಿ ಕಟ್ತಾ ಇದ್ಯಲ್ಲಾ? ಸೀರೆ ಏನಾದ್ರು ಬಂತೇನೇ?"

"ಅಯ್ಯೋ ಎಂತಾದ್ದೂ ಇಲ್ರೀ. ನಾಳೆ ನೋಡ್ತಿರಿ ನನ್ನ ರೂಪೇ ಬದಲಾಯಿಸಿ ಬಿಡತ್ತೆ. ಮಾತಿಗ್ಮುಂಚೆ ನಿಮ್ಮ ಆಫೀಸಿನ ಟೈಪಿಸ್ಟ್ ಹುಡುಗೀನ ಹೊಗಳಿ ಹೊಗಳಿ ಹಾಡ್ತಾ ಇದ್ರಲ್ಲಾ, ನಾಳೆ ನೋಡುವಿರಂತೆ ಯಾರು ಚೆನ್ನ ಅಂತ?"

"ಅಲ್ವೇ ರೂಪು ಬದಲಾಯ್ಸೋದಕ್ಕೆ ನಾಳೆ ಏನು ಮುಹೂರ್ತ? ಇವತ್ತೇ ಯಾಕಾಗ್ಬಾರದು? ಆದೂ ಅಲ್ದೆ ನಮ್ಮ ಆಫೀಸಿನಲ್ಲಿರೊ ಹಿಲ್ಡಾ ನಿನಗಿಂತ ಹದಿನೈದು ವರ್ಷ ಚಿಕ್ಕವಳಿರಬಹುದು' "ಏನಾದ್ರೇನಂತೆ, ಅದರಲ್ಲಿ ಬರೆದಿದೆ "ಈ ಬಣ್ಣ ಉಪಯೋಗಿಸಿದರೆ ಹದಿನೈದು ವರ್ಷ ತರುಣರಾಗಿ ಕಂಡು ನಿಮ್ಮ ಯಜಮಾನರ ಪ್ರೇಮ, ಅನುರಾಗ ಹಾದಿ ತಪ್ಪುವುದನ್ನು ಬಿಡಿಸಿ ನಿಮ್ಮ ಕಡೆ ಒಲಿಸಿಕೊಳ್ಳಬಹುದು ಅಂತ."

ರಾಯರು ಆಶ್ಚರ್ಯಪಡುತ್ತಾ "ಅದೆಂತದೇ ಬಣ್ಣ? ಮುಖಕ್ಕೊ? ಮೈಗೋ? ಎಲ್ಲಿಗೆ? ತಲೆ ಒಂದು ಬಿಳಿ ಬಿಟ್ರೆ ನಿನಗೇನಾಗಿದೆ. ಅಂತ ಚೆನ್ನಾಗಿದಿಯಾ" ಎಂದರು.

"ಅದೆಲ್ಲಾ ನಿಮಗೆ ಅರ್ಥವಾಗೊಲ್ಲಾರೀ. ನಾಳೆ ಸಂಜೆ ಆಫೀಸ್ನಿಂದ ಬರೋ ಹೊತ್ಗೆ ಬಾಗ್ಲಲ್ಲೇ ಕಾದಿರ್ತೀನಿ. ಯಾರೋ ಯುವತಿ ನಿಂತಿದ್ದಾಳೆ, ಬೇರೆ ಮನೆ ಹೊಕ್ಕುಬಿಟ್ನೋ ಏನೋ ಅಂತ ದಿಗ್ಭ್ರಮೆ ಹಿಡಿದು ಕಕ್ಕಾಬಿಕ್ಕಿಯಾಗಬೇಡಿ" ಅಂತ ತೀಕ್ಷ್ಣ ನೋಟದ ಬಾಣವನ್ನು ರಾಯರ ಎದೆಯಲಿ ನೆಟ್ಟು ಬಳುಕುತ್ತಾ ಕುಲುಕುತ್ತಾ, ಕನಸಿನ ಸಾಮ್ರಾಜ್ಯದಲ್ಲಿ ಓಲಾಡುತ್ತಾ ನಲವತ್ತರ ಹರಯದ ಹರಿಣಾಕ್ಷಮ್ಮ ಒಳಗೆ ಹೋದರು.

ಮಾರನೇ ದಿನ ಹರಿಣಾಕ್ಷಮ್ಮನಿಗೆ ಎಲ್ಲಿಲ್ಲದ ಸಡಗರ. ಮನೆಗೆಲಸವೆಲ್ಲಾ ಆದಷ್ಟು ಬೇಗ ಮುಗಿಸಿ ಯಜಮಾನರಿಗೆ ಅವಸರ ಪಡಿಸಿ ಊಟ ಹಾಕಿ ಮನೆಯಿಂದಾಚೆ ಹೊರ ಹಾಕಿದರು. ಒಂದು ಬಟ್ಟಲು ಹರಳೆಣ್ಣೆ ಒತ್ತಿಕೊಂಡು ನೀರು ಹಾಕಿಕೊಂಡರು. ಬಿಸಿಲು ಕಾಲದ ನೆತ್ತಿ ಸುಡುವ ಸೂರ್ಯನನ್ನೂ ಗಮನಿಸದೆ ಬಿಸಿಲು ಮಚ್ಚಿಗೆ ಹೋಗಿ ತಲೆಕಾಯಿಸಿಕೊಂಡರು. ಮಹಡಿಯಿಂದ ಇಳಿದು ಬಂದು ಕನ್ನಡಿಯ ಮುಂದೆ ಕೂತರು. ಕಿಟಕಿಯಲ್ಲಿಟ್ಟಿದ್ದ ಚೀಟಾ ಬ್ರ್ಯಾಂಡ್ ಹೇರ್ ಡೈಯಿಂಗ್ ಶೀಷೆ ಕೈಯಲ್ಲಿ ಹಿಡಿದು "ಹದಿನೈದು ವರ್ಷ ಚಿಕ್ಕವಳಾಗಿ ಕಾಣುವಂತೆ ಮಾಡುವ ಮಾಯಾಂಗಿಣಿ ನೀನೇ ಅಲ್ಲವೇ? ಎಂದು ಹಿರಿ ಹಿರಿ ಹಿಗ್ಗಿ ಕಾರ್ಯೋನ್ಮುಖರಾದರು. "ಪುಡಿ ಗಾಜಿನ ತಟ್ಟೆಯಲ್ಲಿ ಹಾಕಿ ಕಲಿಸಬೇಕು?" ತಟ್ಟೆಗಾಗಿ ಏನು ಮಾಡುವುದು? ಎಂದು ಯೋಚಿಸಿದರು. ತಟ್ಟನೆ ಅವರ ಚುರುಕು ಮೆದುಳಿಗೆ ನಾಯಿ 'ರೂಬಿ' ತಟ್ಟೆ ಏಕಾಗಬಾರದೆಂದು ಹೊಳೆಯಿತು. ಮನಸ್ಸಿಗೆ ಬಂದುದೇ ತಡ, ತಟ್ಟೆ ಬಂತು. "ಅರ್ಧ ಚಮಚ ಪುಡಿ ನೀರಲ್ಲಿ ಕಲಸಬೇಕು" ಅಂತ ಹೇಳ್ತಾನೆ. "ನನ್‌ತಲೆ ನೆತ್ತಿಯಿಂದ ಕೊನೇವರೆಗೂ ಬಿಳಿಯಾಗಿದೆ. ಇರಲಿ" ಎಂದು ಅರ್ಧ ಶೀಷೆ ಬಗ್ಗಿಸಿ, ಅರ್ಧ ಚೊಂಬು ನೀರು ಹಾಕಿ, ನಾಯಿ ತಟ್ಟೆಯಲ್ಲಿ ಹೇರ್ ಡೈಯಿಂಗ್ ಬಣ್ಣದ ಕರೀ ನೀರು ಸಿದ್ಧವಾಯಿತು. ಶೀಷೆ ಜೊತೆಯಲ್ಲಿದ್ದ ಪುಟ್ಟ ಬ್ರಷ್ ಬಹಳ ಚಿಕ್ಕದಾಗಿ ಕಾಣಿಸಿತು ಹರಿಣಾಕ್ಷಮ್ಮನ ಕಣ್ಣಿಗೆ. "ಇದರ ಜೊತೆ ಎಷ್ಟೊತ್ತು ಆಟವಾಡುವುದುದೆಂದು ಯೋಚಿಸಿ, ರಾಯರ ಕರೀ 'ಷೂ' ಬ್ರಷ್ ಮೇಲೆ ಹರಿಣಾಕ್ಷಮ್ಮನ ವಕ್ರದೃಷ್ಟಿ ಬಿತ್ತು. ಈ ವೇಳೆಗಾಗಲೇ ಬಿಸಿಲು ಕಾಯಿಸಿದ ಪರಿಣಾಮವಾಗಿ ಸಣ್ಣಗೆ ತಲೆ ಶೂಲೆ ಬೇರೆ ಆರಂಭವಾಗಿತ್ತು. 'ಹೇರ್ ಡೈಯಿಂಗ್' ಕಾರ್ಯಕ್ರಮ ಮುಗಿದರೆ ಸಾಕಪ್ಪ ಅನ್ನಿಸಿತು. ತಮ್ಮ ಮನೆಯಲ್ಲಿ ಇರುವ ಒಂದೇ ಒಂದು ದೊಡ್ಡ ಮಸಕು ಕನ್ನಡಿ ಮುಂದೆ ಮಾರಣ ಹೋಮಕ್ಕೆ ಕುರಿ ಕತ್ತು ತಗ್ಗಿಸುವಂತೆ, ತಲೆ ತಗ್ಗಿಸಿ ಬ್ರಷ್ ಅನ್ನು ತಟ್ಟೆಯಲ್ಲಿ ರಪರಪ ಅದ್ದಿ ರಪರಪ ತಲೆಗೆ ಇಷ್ಟ ಬಂದಂತೆ ಬಳಿದರು. ಪಾಪ! ನೀರು ಹೆಚ್ಚಾಯಿತೋ ಏನೋ, ಕೂದಲ ಮಧ್ಯದಿಂದ ಬಣ್ಣ ಸ್ವೇಚ್ಛೆಯಾಗಿ ಹಣೆಯ ಮೇಲೆ ದಶದಿಕ್ಕಿನಿಂದ ವಕ್ರವಾಗಿ ಹರಿದು, ಹುಬ್ಬಿನ ನಡುವೆ ಸಂಗಮವಾಗಿ ಮೂಗಿನ ತುದಿಯಿಂದ ಕರೀ ನೀರಿನ ಜಲಪಾತ ಹರಿಯಿತು. ಹೇಗೋ ಅಜಾಗರೂಕತೆಯಿಂದ ಕಣ್ಣಿಗೂ ಕೊಂಚ ಸಿಡಿದು ಭಗ ಭಗ ಉರಿಯಲಾರಂಭಿಸಿತು. ಕಣ್ಣು ಮುಚ್ಚಿಕೊಂಡೇ ಪಕ್ಕದ ಸ್ಟ್ಯಾಂಡಿಗೆ ಕೈ ಹಾಕಿ ಸಿಕ್ಕಿದ ಬಟ್ಟೆಯಿಂದ ಮುಖ, ನೆತ್ತಿ ಎಲ್ಲಾ ಒರೆಸಿಕೊಂಡರು. ಏನು ಒರೆಸಿದರೇನು! ಕರೀ ಬಣ್ಣ ಸಾಕಷ್ಟು ಹಾವಳಿ ಮಾಡಿತ್ತು. ಕಣ್ಣು ಬೇರೆ ಬಿಡುವುದಕ್ಕೆ ಕಷ್ಟವಾಗಿತ್ತು.

ಹರಿಣಾಕ್ಷಮ್ಮನಿಗೆ ಒಳಗೇ ಆಸೆ "ನಿಜಕ್ಕೂ ಹದಿನೈದು ವರ್ಷ ಚಿಕ್ಕವಳಾಗಿ ಕಾಣುತ್ತಿರಬಹುದಲ್ಲವೇ? ಆ ಟೈಪಿಸ್ಟ್ ಗರ್ಲ್ ಮುಖಕ್ಕೆ ನೀವಾಳಿಸೋ ಹಾಗೆ

ಆ ತನ್ನ ರೂಪು ಬದಲಾಯಿಸಿರಬಹುದೆಂದು ಒಳಗೇ ಹಿಗ್ಗು. ಇಷ್ಟರಲ್ಲೇ ಬೀದಿ ಬಾಗಿಲು ಬಡಿದ ಸಪ್ಪಳವಾಯಿತು. ಯಾರಿರಬಹುದೆಂದು ಗೋಡೆ ಪಕ್ಕಕ್ಕೆ ಅರೆ ಗಣ್ಣು ಬಿಟ್ಟುಕೊಂಡು ಸಾವರಿಸಿಕೊಂಡೇ ಬಾಗಿಲು ತೆಗೆದರು. ಆಫೀಸ್ ಡ್ರಾಯರಿನ ಬೀಗದ ಕೈ ಬೆಳಿಗ್ಗೆ ಹೋಗುವಾಗ ಅವಸರದಲ್ಲಿ ಮರೆತು ಹೋಗಿದ್ದ ರಾಯರು ಪೆನ್ನು ತೆಗೆದುಕೊಂಡು ಹೋಗುವುದಕ್ಕೆ ಬಂದಿದ್ದರು. ಬಾಗಿಲು ತೆಗೆಯುತ್ತಲೇ ಈ ಕರಾಳ ಭೈರವಿ ಅವತಾರ ನೋಡಿ ದೆವ್ವ ಅಂತ ಅನ್ನೋವಾಗಲೇ "ದೆವ್ವಾನೂ ಅಲ್ಲಾ ಏನೂ ಅಲ್ಲ. ನಾನೇ, ನಿಮ್ಮ ಅರ್ಧಾಂಗಿ ಹರಿಣಾಕ್ಷಿ" ಎನ್ನುತ್ತ ಸಿಟ್ಟಿನಿಂದ ಅನ್ನುತ್ತಲೂ, "ಓಹೋ! ಈ ಮಧುರವಾಣಿ ನನ್ನ ಹೆಂಡತೀದೆ ಅಂತ ಖಚಿತವಾಗಿ "ಇದೇನೆ ಹರಿಣು, ನಿನ್ನ ಅವತಾರ? ಇದೇ ಏನೇ ನೀನು ರೂಪು ಬದಲಾಯ್ಸಿದ್ದು? ಎಪ್ಪತ್ತು ವರ್ಷದ ಮುದುಕಿ ಹಾಗೆ ಹಣೆ, ಕೆನ್ನೆ ಎಲ್ಲದರ ಮೇಲೂ ಕಪ್ಪು ಗೀರುಗಳು? ಒಳ್ಳೆ ಹುಲಿ ವೇಷ ಇದ್ದಾಗಿದೆಯಲ್ಲೇ? ಈ ರೂಮಿನಲ್ಲೆಲ್ಲಾ ಏನು ಅವಾಂತರ? ಅಯ್ಯೋ! ಇದ್ದಿದ್ದು ಒಂದು ಗಟ್ಟಿ ಪಂಚೆ. ಅದರಲ್ಲೂ ಕಪ್ಪು ಕರೆಗಳು? ಷೂ ಪಾಲಿಷ್ ಬ್ರಷ್ ಏಕೆ ತೊಗೊಂಡ್ಯೇ, ರಾಮ! ರಾಮ! ಕೊನೆಗೆ ನಾಯಿ ತಟ್ಟೆ ಸಹ ಬಿಟ್ಟಿಲ್ವಲ್ಲೇ? ಅದಕ್ಕೇ ಇರ್ಬೇಕು ನಾನು ಗೇಟು ತೆಗೀತಾಲೇ ನನ್ನನ್ನ ನೋಡಿ ಗುರುಗುಟ್ಟಿತು. ಮೊದಲೇ ಪಾದರಸ ಮಾಸಿ ಮಸುಕಾಗಿದ್ದ ಇದ್ದಿದ್ದ ಒಂದು ಕನ್ನಡೀಗೆಲ್ಲಾ ಸ್ಪ್ರೇ ವರ್ಕ್ ಮಾಡಿದ್ದೀಯಲ್ಲೇ? ಇದೆಲ್ಲಾ ಸಹಿಸಿಕೊಂಡೇನು, ನಿನ್ನ ಈ ಚಿರತೆ ಬರೆಗಳನ್ನ ನೋಡಲಾರೆ. ಹೋಗು ಮೊದಲು ಚೊಕ್ಕಟವಾಗಿ ಸ್ನಾನ ಮಾಡಿ ಬಾ. ನೀನೋ ನಿನ್ನ ತಲೇನೋ ಒಳ್ಳೇ ಕರೀ ಬೆಕ್ಕಿನ ತಲೆಗೆ ಬಿಳಿ ಬಾಲ ಇದ್ದಾಗಿದ್ಯಲ್ಲೇ? ಹುಂ! ಸರಿ, ಈಗ ಅರ್ಥವಾಯ್ತು. ನಿನ್ನೆ ಗಂಟೆಗಟ್ಲೆ ಆ ಜಾಹಿರಾತನ್ನ ಓದ್ತಿದ್ದ ಕಾರಣ. ನಿನ್ನ ತಲೇಲಿ ಹೇಗೆ ಹೊಕ್ತು ಈ ತಲೇಗೆ ಬಣ್ಣ ಬಳ್ಕೊಳ್ಳೋ ಭೂತ?

"ನೀವು ಮಾತಿಗ್ಮುಂಚೆ ಹಂಗಸ್ತಾ ಇದ್ರೀ. ನಲವತ್ತು ವಯಸ್ಸಿಗೆ ಅರವತ್ತರ ಮುದುಕಿ ಹಾಗೆ ಕಾಣಸ್ತಿ ಅಂತ ಅದೂ ಅಲ್ದೆ ನಿಮ್ ಟೈಪಿಸ್ಟ್ ಗರ್ಲ್......."

"ಸಾಕ್ಮಾಡೇ ಮಹರಾಯ್ತಿ. ಮೊದಲು ಈ ಬಾಬಯ್ಯನ ವೇಷ ಹೋಗ್ಲಿ, ಆ ಮೇಲೆ ನಿಧಾನವಾಗಿ ಮಾತಾಡೋಣ. ಅಂತೂ ಈ ಹೆಂಗಸ್ರಿಗೆ ಎಷ್ಟು ವಯಸ್ಸಾದರೂ ಇನ್ನೂ ಚಿಕ್ಕ ಪ್ರಾಯದವರ ಹಾಗೆ ಕಾಣ್ಬೇಕು ಅಂತ ಅದೇನು ಆಸೇನೋ ಬೇಗ ಬಾ, ಮತ್ತೆ ಆಫೀಸಿಗೆ ಹೋಗ್ಬೇಕು ಹಾಂ....ಅಂತೂ ಹರಿಣಾಕ್ಷಮ್ಮನ ಹೇರ್ ಡೈಯಿಂಗ್ ಅರ್ಧದಲ್ಲೇ ಮುಕ್ತಾಯವಾಯಿತು.

—ಸುನೀತಿ ಕೃಷ್ಣಸ್ವಾಮಿ.

ಚಿಕ್ಕಪ್ಪ ಬೇಲಿ ಹಾಕಿದ್ದು

ಕ್ರಿಸ್‌ಮಸ್ ಕಾಲದಲ್ಲಿ ರಸ್ತೆಯಲ್ಲಿ ವಾಹನಗಳ ಅಪಘಾತದಿಂದಲೇ ಇನ್ನೂರು ಮುನ್ನೂರು ಮಂದಿ ಸಾಯುತ್ತಾರೆ ತಮ್ಮೂರಿನಲ್ಲಿ ಎಂದು ನ್ಯೂಯಾರ್ಕಿನವರು ವರ್ಷೇ ವರ್ಷೇ ಜಂಭಕೊಚ್ಚಿಕೊಳ್ಳುವುದುಂಟಲ್ಲ. ಹಾಗೆಯೇ ನಮ್ಮ ರಾಜಧಾನಿ ಬೆಲೆಯೇರಿಕೆಯಲ್ಲಿ ಭಾರತದಲ್ಲೇ ಮೊದಲನೇದು ಎಂದು ತಿಳಿದಾಗ ನಾವೂ ಒಂದು ತರಹದಲ್ಲಿ ಹಿಗ್ಗಿದ್ದೇ ಹಿಗ್ಗಿದ್ದು. ಆದರೆ ನಮ್ಮ ಚಿಕ್ಕಪ್ಪ ಮಾತ್ರ ಈ ರೀತಿ ಹಿಗ್ಗುವವರ ಮುಂಡ ಮೋಚಿತು ಎನ್ನುತ್ತಾ ಏರಿದ ಬೆಲೆಗಳಿಂದ ರಕ್ಷಿಸಿಕೊಳ್ಳಲು ಕಾರ್ಯಸನ್ನದ್ಧನಾದ. ಮನೆಗೆ ಬೇಕಾದ ತರಕಾರಿಗಳನ್ನು ನಮ್ಮ ಹಿತ್ತಲಲ್ಲೇ ಬೆಳೆಸಬೇಕೆಂದು ನಿರ್ಧರಿಸಿದ. ಹಾಗಲ್ಲದೆ ಪ್ರತಿಯೊಂದನ್ನು ಕೊಂಡು ಕೊಂಡೇ ತಿನ್ನುವ ಗತಿಯಾದರೆ ಒಂದು ಕಾಲದಲ್ಲಿ ಇಲ್ಲಿರದ ದಂಡಕಾರಣ್ಯಕ್ಕೆ ವಲಸೆಹೋಗಬೇಕಾದೀತೆಂದು ಎಚ್ಚರಿಸಿದ.

ಸರಿ ತರಕಾರಿ ಬೆಳೆಯುವ ಕಾರ್ಯಕ್ರಮದಲ್ಲಿ ಮೊದಲ ಹೆಜ್ಜೆ ಬೇಲಿ ಹಾಕುವುದಲ್ಲವೇ? ಕಳ್ಳಿಗಿಡಗಳ ಮುರಕಲ ಬೇಲಿ ಮೊದಲೇ ಇತ್ತು ಆದರೆ ಅದು ಭದ್ರವಲ್ಲ ಎಂದು ಸಾಕಷ್ಟು ಭದ್ರವಾದ ಬೇಲಿಯನ್ನು ಬೊಂಬುಗಳನ್ನು ಬಿಗಿದು ರಚಿಸಿದ ಚಿಕ್ಕಪ್ಪ.

ಇಂಡಿಯಾಗೆ ಹಿಮಾಲಯದ ಬೇಲಿ ಇದ್ದ ಹಾಗಿದೆ. ದನಕರುಗಳು ಕಾಲಿಡುವ ಹಾಗಿಲ್ಲ ಅಂತ ನಾವಂದುಕೊಂಡೆವು. ಆದರೆ ಎಮ್ಮೆ ಕೋಣಗಳಿಗೆ ಈ ಬೇಲಿ ತಡೆದೀತೆ ಎಂದು ಸಂಶಯ ವ್ಯಕ್ತಪಡಿಸಿ ಬಲವಾದ ನಾಲ್ಕು ಗೂಟ ಜಡಿದು ಭದ್ರಪಡಿಸುವುದು ಒಳ್ಳೆಯದು ಎಂದಾಗ, ಚಿಕ್ಕಪ್ಪ, ಆನೆ ಕೂಡ ಈ ಬೇಲಿ ದಾಟುವ ಹಾಗಿಲ್ಲ ಎಂದು ಬಡಾಯಿ ಕೊಚ್ಚಿದ.

ತರಕಾರಿ ಬೀಜ ಬಿತ್ತಿದ್ದಾಯಿತು. ಮೊಳಕೆ ಬಂತು ಹಸುರೊಡೆದಾಗ ಒಂದು ದಿನ ಆಚೆ ಬೀದಿಯ ಹನುಮನ ಕೋಣಗಳು ಬೇಲಿಯ ಹೊರಗೆ ನಿಂತು ಕಣ್ಣರಳಿಸಿ ತರಕಾರಿ ಸಸಿಗಳನ್ನು ನೋಡಿದವು. ನುಗ್ಗಲು ಪ್ರಯತ್ನಿಸದೆ, ಕುಪ್ಪಳಿಸಿ ಒಂದು ಕುಣಿತ ಹಾರಿ ಹೊರಟುಹೋದವು. "ಕಂಡೆಯಾ ತಮಗೆ ಜಗ್ಗುವ ಬೇಲಿಯಲ್ಲ ಇದು ಎಂದು ತಿಳಿಯಿತು ಅವುಗಳಿಗೆ" ಎಂದು ಚಿಕ್ಕಪ್ಪನ ಜಂಭವೇ ಜಂಬ. "ಹಾಗಲ್ಲ ಚಿಕ್ಕಪ್ಪ... ಗಿಡಗಳೆಲ್ಲ ಇನ್ನು ಕೊಂಚ ದೊಡ್ಡದಾಗಲಿ, ಆಗ ಚೆನ್ನಾಗಿ ಮೆಲ್ಲಬಹುದು ಎಂದು ಸಂತೋಷದಿಂದ ಸವಿಗಣಸು ಕಾಣುತ್ತ ಹೊರಟು

ಹೋಗಿವೆ" ಎಂದೆವು ನಾವು. "ಹೋಗೋ ಹೋಗೋ" ಎಂದು ಬಾಯಿ ಹಾರಿಸಿದ ಚಿಕ್ಕಪ್ಪ. ತನ್ನ ಬೇಲಿ ದಾಟಿ ಪ್ರಾಣಿಯೇ ಆಗಲಿ, ಮನುಷ್ಯನೇ ಆಗಲಿ ಯಾರೇ ಆಗಲಿ, ಬರಲು ಅಸಾಧ್ಯ ಎಂದು ಸಾರಿದ ಆತ, ಲೋಕಸಭೆಯಲ್ಲಿ ಚವಣರ ಹಾಗೆ. ಗಿಡಗಳೆಲ್ಲ ಅಡಿ ಎತ್ತರ ಬೆಳೆದವು. ಹೂವು ಹೀಚು ಬಿಟ್ಟವು. ಒಂದು ದಿನ ಇದ್ದಕ್ಕಿದಂತೆ ಲಟ ಲಟ ಶಬ್ದವಾಯಿತು. ಹಿತ್ತಲಕಡೆ ಓಡಿ ಹೋಗಿ ನೋಡುವಾಗ ಕೋಣಗಳು ಬೇಲಿಯನ್ನು ಭೇದಿಸಿ ಹಿತ್ತಲಿಗೆ ನುಗ್ಗಿದ್ದವು. ಚಿಕ್ಕಪ್ಪ ಬಡಿಗೆ ಹಿಡಿದು ಮುನ್ನುಗ್ಗಿದ್ದನ್ನು ಕಂಡು ಅವು ಹಿಂದೇಟು ಹೊಡೆಯಬೇಕಾಯಿತು. ಆದರೆ ಹಿಮ್ಮೆಟ್ಟುವ ಭರದಲ್ಲಿ ತಮ್ಮ ಮಾರಗಲ ಕೊಂಬುಗಳಲ್ಲಿ ಬೇಲಿಯ ಒಂದೊಂದು ಅಂಶವನ್ನು ಹೊತ್ತುಕೊಂಡೇ ಓಡಿದವು. ಬೇಲಿಯ ಅವಶೇಷಗಳನ್ನು ಸಂಪಾದಿಸಿ ತರಲು ಚಿಕ್ಕಪ್ಪ ಹನುಮನ ಹಟ್ಟಿಯ ತನಕ ಅವನ್ನು ಹಿಂಬಾಲಿಸಬೇಕಾಯಿತು.

ಹೇಗಿದೆ ಚಿಕ್ಕಪ್ಪ ನಿನ್ನ ಭದ್ರವಾದ ಬೇಲಿ ಎಂದು ಕೇಳಿದೆವು.

"ಹೋಗ್ರೋ ಹೋಗ್ರೋ....ಬೇಲಿ ಭದ್ರವಾಗಿಯೇ ಇತ್ತು. ಅವನ್ನು ಮುರಿಯಬೇಕಾದರೆ ಹನುಮನ ಕೋಣಗಳಂಥ ಯಮಕೋಣಗಳು ಬೇಕಾಯಿತು" ಎಂದು ಮೀಸೆ ಮಣ್ಣಾಗಲಿಲ್ಲವೆಂಬ ಸಾಧನೆಗೆ ತೊಡಗಿದ ಚಿಕ್ಕಪ್ಪ.

ಹಿಂದೊಮ್ಮೆ ಆತ ತಾನು ತಂದ ಮಣ್ಣಿನ ಗುಡಾಣ ಬಹಳ ಗಟ್ಟಿ ಎಂದು ವಾದಿಸುತ್ತ ಗುಡಾಣ ಹತ್ತಿ ಕುಪ್ಪಳಿಸಿ, ಅದು ಒಡೆದು ಚೂರಾದಾಗ "ಗುಡಾಣ ಬಹು ಗಟ್ಟಿ ಜಾತಿಯದು. ಅದು ಒಡೆಯಬೇಕಾದರೆ ನನ್ನಂತಹ 160 ಪೌಂಡಿನ ಆಸಾಮಿ ಅದರಮೇಲೆ ಕುಪ್ಪಳಿಸಬೇಕಾಯಿತು" ಎಂದು ಮುಖ ಉಳಿಸಿಕೊಳ್ಳಲು ಯತ್ನಿಸಿರಲಿಲ್ಲವೆ ?

ಚವಣರ ಹಾಗೆ ಚಿಕ್ಕಪ್ಪ ಬೇಲಿ ಭದ್ರ ಅದರ ಚಿಂತೆ ಬೇಡ ಎಂದು ಹೇಳಿಕೊಳ್ಳುತ್ತಲೇ ಇದ್ದ. ಆದರೆ ಚಿಕ್ಕಪ್ಪ ಹನುಮನ್ನ ಕೋಣಗಳಂಥ ಯಮಕೋಣಗಳು ಬೇಕಾದುವು ತನ್ನ ಬೇಲಿ ಕೆಡವುಕ್ಕೆ ಎಂದು ಸಮರ್ಥಿಸಿಕೊಂಡ ಪರಿಸ್ಥಿತಿ, ಚವಣರಿಗೆ ಬಾರದಿದ್ದರೆ ಸಾಕು ಸದ್ಯ !

—ರಾಮಿ

ಸಿಂಧ ಘಟ್ಟದಲ್ಲಿ ಒಬ್ಬ ದೇವರಿದ್ದನು.
ಮನುಜರಂತೆ ಅವನಿಗೂನು ಹೆಂಡರಿದ್ದರು.
ತೌರಿಗೆಂದು ಹೋದ ಆಕೆ
ಬೇಗ ಬಾರದಿರಲು ರೇಗಿ
ಹಿಂದು ಮುಂದಾಗಿ ತಾನು ಗುಡಿಯಲಿದ್ದನು.

ಕೊನೆಯ ನಮಸ್ಕಾರ

ತೋಟಗಾರಿಕಾ ಪ್ರಶಿಕ್ಷಣ ಪದವಿಯ ಪ್ರಶಸ್ತಿ ಪತ್ರವನ್ನು ಅಧ್ಯಕ್ಷರು ಕೈಗೆ ಕೊಟ್ಟು ಬೆನ್ನು ತಟ್ಟಿದಾಗ ಹನುಮನಿಗೆ ಅನಿರ್ವಚನೀಯ ಅನುಭವವಾಯಿತು. ಬೆಟ್ಟವನ್ನು ಹೊತ್ತೇನೆಂಬ ಉತ್ಸಾಹ. ಹಳ್ಳಿಗಳ ಪುನರುದ್ಧಾರವೇ ಭಾರತದ ಭವ್ಯ ಭವಿಷ್ಯಕ್ಕೆ ಮಾರ್ಗ. ರೈತನ ಏಳಿಗೆಯೇ ಹಳ್ಳಿಗಳ ಪುನರುದ್ಧಾರ. ತೋಟಗಳ ಬೆಳವಣಿಗೆಯೇ ರೈತನ ಏಳಿಗೆ. ತೋಟಗಳ ಬೆಳವಣಿಗೆಗೆ—

ಇದಕ್ಕೆ ಇನ್ನೂರು ಪಾಲು ಆನಂದ, ಸಂಜೀವಿನಿಯನ್ನು ಹೊತ್ತು ಆಗಸಕ್ಕೆ ಹಾರಿದ ಆಂಜನೇಯನಷ್ಟು ಹುಮ್ಮಸ್ಸು, ಕೊಳ್ಳೇಗಾಲದ ಮರಳೀಗುಡ್ಡದ ಮೇಲೆ ನಿಂತು ಸುತ್ತಲೂ ನೋಡಿದಾಗ ಹನುಮ ಅನುಭವಿಸಿದ.

ಅಂದು ಮಟ ಮಟ ಮಧ್ಯಾಹ್ನ. ಸೂರ್ಯನ ಪ್ರಖರ ಕಿರಣಗಳಿಂದ ಮರಳೀಗುಡ್ಡದ ಬಂಡೆಗಳು ಕಾದ ಕಬ್ಬಿಣವಾಗಿದ್ದವು. ತೋಟಗಾರಿಕಾ ಕೇಂದ್ರದಿಂದ ಕೊಳ್ಳೇಗಾಲಕ್ಕೆ ಫೀಲ್ಡ್‌ಮನ್ ಆಗಿ ಬಂದ ಹನುಮ, ಬಸ್ಸಿಂದಿಳಿದವನೇ ನೇರ ಮರಳೀಗುಡ್ಡವನ್ನು ಹತ್ತಿ ಊರಿನ ಸುತ್ತಳತೆ, ವಿಸ್ತೀರ್ಣಗಳನ್ನು ಗುಣಿಸತೊಡಗಿದ. ಊರೆಲ್ಲ ಭಣ ಭಣಗುಟ್ಟುತಿತ್ತು. ದೃಷ್ಟಿ ಎಟಕುವವರೆಗೂ ಬರಡು ಭೂಮಿ ಬೆಂದ ನೆಲ. ಹಸುರು ಎನ್ನುವುದು ಹೆಸರಿಗೂ ಇಲ್ಲ. ಹನುಮನಿಗೆ ಬೆಂಗ್ಳೂರಿಂದ ಮಾಡಿದ ಪ್ರಯಾಣದ ಆಯಾಸವೆಲ್ಲಾ ಕ್ಷಣದಲ್ಲಿ ಮಾಯವಾಗಿ ಹೋಯಿತು. ಕಾದ ಕಲ್ಲೂ, ಮಂಡೆ ಬಿರಿಯುವಂತೆ ಉರಿಯುತ್ತಿದ್ದ ಸೂರ್ಯನ ಶಾಖವೂ ಹನುಮನಿಗೆ ಏನೋ ತಂಪು ತಂಪುಗೆ ಅನಿಸಿತು. ಈ ಬರಡು ಭೂಮಿಯನ್ನು ಭಂಗಾರಮಾಡಿದರೇನೇ ಸೈ! ಅಹ! ಎಷ್ಟು ವಿಶಾಲವಾದ ಊರು. ನಾನು ಕಲಿತದೆಲ್ಲ ಪ್ರಯೋಗಿಸಲಿಕ್ಕೆ ಅದೆಷ್ಟು ಅವಕಾಶಗಳು! ಎಂದುಕೊಂಡ.

ಮರಳಿಗುಡ್ಡದ ತಪ್ಪಲಲ್ಲೇ—ಪಂಚಾಯತಿ ಕ್ವಾರ್ಟರ್ಸ್. ಹನುಮನಿಗೆ ಅಲ್ಲೇ ವಾಸ. ಸೊಗಸಾದ ಸಿಮೆಂಟ್ ಕಾಂಕ್ರೀಟ್ ಮನೆ. ಮೂರು ನಾಲ್ಕು ಕೊಟಡಿಗಳು. ಹನುಮ ತನ್ನ ಹಡಪದಲ್ಲಿ ತಂದಿದ್ದ ಎಲ್ಲಾ ವಿಧದ ಚಿತ್ರ ವಿಚಿತ್ರ ಬೀಜಗಳನ್ನು ಕೊಟಡಿಗಳಲ್ಲಿ ಓರಣವಾಗಿ ಜೋಡಿಸಿದ. ಬಣ್ಣ ಬಣ್ಣದ ಹಣ್ಣುಗಳ ಚಿತ್ರಗಳನ್ನು ಗೋಡೆಗಳಿಗೆ ನೇತುಹಾಕಿದ.

ಕೊಳ್ಳೇಗಾಲಕ್ಕೆ ಫೀಲ್ಡ್‌ಮನ್ ಆಗಿ ಹನುಮ ಹೊರಟಾಗ ತೋಟಗಾರಿಕಾಧ್ಯಕ್ಷರು "ಊರಿಗೆ ಹೋದವನೇ ಮೊದಲು ಅಲ್ಲಿನ ಹತ್ತು ಸಮಸ್ತರು ಅಂದರೆ

ಎಲ್ಲದಕ್ಕೂ ಮುಂದೆ ಬರೋ ವ್ಯಕ್ತಿಗಳು, ಎಮ್ಮೆಲೆಗಳು, ಪಂಚಾಯ್ತೀವ್ರು, ಪುಢಾರಿಗಳು, ಪಾರ್ಟಿಗಳವರು—ಎಲ್ಲರಿಗೂ ನಮಸ್ಕಾರ ಹಾಕಿ, ಬಿಟ್ಟಿ ಬಿತ್ತನೆಗಳನ್ನು ಕೊಟ್ಟು, ನಂತರ ಕೆಲಸ ಶುರುಮಾಡಪ್ಪಾ, ಹೊಸಬಾ ನೀನು, ಇನ್ನೂ ಪಳಗಬೇಕು" ಎಂದಿದ್ದರು. ಒಂದೆರಡು ದಿನಗಳಲ್ಲಿ ಕೊಳ್ಳೇಗಾಲದಲ್ಲೆಲ್ಲಾ ಹನುಮನ ಮಾತೇ ಆಯಿತು. "ಈ ಊರಿಗೆ ಇದೊಂದು ಕೇಡು" ಎಂದು ಸರ್ವೆಯರ್ ಶಣ್ಮುಖರೆಂದರೆ "ಪರವಿಲ್ಲಾ, ನಮ್ಮೂರ ಕಡೇನೂ ಸರ್ಕಾರಕ್ಕೆ ಗಮನ ಹತ್ತಿದೆ" ಅಂತಂದ್ರು ದೊಡ್ಡಟ್ಟಿ ದಮಾಸೆಯವರು. ಊರಿನ ಹತ್ತೂ ಸಮಸ್ತರೂ ಹನುಮನಿಗೆ ಹತ್ತು ಮಾತು—ಹತ್ತು ದಾರಿ ಹೇಳಿದರು. ಕಸಿ ಸಸಿ ಯಾವ್ಯಾವುದಿದೆ? ತೆಂಗಿನ ಸಸಿಗಳು ಯಾವಾಗ ಬರುತ್ವೆ? ಮಾವು ನೆಡೋಕೆ ಇದೀಗ ಸರಿಯಾದ ಸಮಯ, ಕೂಡ್ಲೆ ಒಂದ್ನೂರ್ ಸಸಿ ತರ್ಸಿದ್ರೆ ಸರಿಹೋಗುತ್ತೆ ಅಂತ ಹನುಮನ ಬೆನ್ನು ಚಪ್ಪರಿಸಿದರು.

ಹನುಮನ ಫೀಲ್ಡ್ ರಿಪೋರ್ಟ್‌ಗಳು ಅಧ್ಯಕ್ಷರಿಗೆ ತಲುಪಿದಾಗ ಅವರು ಮನಸ್ಸಿನಲ್ಲೇ 'ಭಲೆ ಹನುಮ!' ಅನ್ನೋತಿದ್ದರು. "ಎಲ್ಲರೂ ಮನೆಗಳಲ್ಲಿ ತೋಟಗಳಲ್ಲಿ ಹಳ್ಳ ತೋಡಿ ಇಟ್ಟಿದಾರೆ ಸಾರ್. ಮರಳು ಗೊಬ್ಬರ ಹಾಕಿ ಸಸಿಗಳಿಗೆ ಕಾದು ಕುಳಿತಿದಾರೆ ಸಾರ್. ಒಳ್ಳೆ ಕೆಂಜಗದ ತೆಂಗಿನ ಸಸಿಗಳು ಒಂದ್ನೂರಾದ್ರೂ ಕೂಡಲೇ ಕಳಿಸಬೇಕು ಸಾರ್", "ಪನ್ನೇರಳೆ, ಅಂಜೂರ ಅದೆಲ್ಲಾ ಈ ಊರಿಗೆ ಸರಿ ಅಲ್ವಂತೆ ಸಾರ್ ಬರೀ ಕಪಿ ಕಾಟ, ಕಾಯೋದು ಭಾಳ ಕಷ್ಟ, ಒಳ್ಳೆ ಕಸಿ ಮಾವು, ಮಲಗೂಬೆಯೋ ಬಾದಾಮಿಯೋ ಆದರೆ ಬಹಳ ಒಳ್ಳೇದು, ಕೂಡ್ಲೆ ತರ್ಸು ಅಂತ ಜಲುಮ್ ಮಾಡ್ತಿದಾರೆ ಸಾರ್" ಅಂತ ದಿನಾ ಒಂದಿಲ್ಲ ಒಂದ್ ತರಾ ಪತ್ರ ಹನುಮನಿಂದ ಅಧ್ಯಕ್ಷರಿಗೆ ಬರುತ್ತಲೇ ಇರೋದು.

ಇಷ್ಟೆಲ್ಲಾ ಆಗೋ ಹೊತ್ತಿಗೆ ಹನುಮ ಕೊಳ್ಳೇಗಾಲಕ್ಕೆ ಬಂದು ತಿಂಗಳೆರಡು ಕಳೀತಾ ಬಂತು. ಊರಿನ ಭೂಮಿಯಿಂದ ಇಲ್ಲೀತನಕ ಒಂದ್ ಪಚ್ಚೆ ಎಬ್ಬಿಸಿರಲಿಲ್ಲ. ತನ್ನ ಕ್ವಾರ್ಟರ್ಸ್‌ನಲ್ಲಿ ಕುಂಡ ಒಂದರಿಂದ ಕುಂಬಳದ ಬಳ್ಳಿಯೊಂದನ್ನೆಬ್ಬಿಸಿದ್ದ. ಜನರ ಭೇಟಿ ಪ್ರಚಾರದಲ್ಲೇ ಅವನ ವೇಳೆಯೆಲ್ಲಾ ಕಳೆದುಹೋಗಿದ್ದಿತು. ಬದನೆ, ಬೆಂಡೆ, ದಂಟು, ಚಕ್ಕೋತ ಬೆಳೀರೋ ಭಾಳ ಒಳ್ಳೇ ಫಸಲು ಬರುತ್ತೆ, ಜಪಾನು, ಜರ್ಮನಿಯಿಂದ ತರ್ಸಿರೋ ಬಿತ್ತನೆ. ಬಿಟ್ಟಿಗೆ ಕೊಡ್ತೇನೆಂದ್ರೆ ಊರವರು "ಅದೆಲ್ಲಾ ಬೇಳೀಂತ ಹೇಳೋಕೆ ನೀನೇ ಆಗ್ಬೇಕಾ? ದಿನಾ ಅವಕ್ಕೆ ನೀರೆಲ್ಲಿಂದ ತರೋಣ? ಆಪಾಟಿ ಬೆವರು ಹರ್ಸಿದ್ರೆ ಬರೋದು ಅಷ್ಟರಲ್ಲೇ ಐತೆ! ಒಳ್ಳೇ ತೆಂಗಿನ ಸಸಿ ಆದ್ರೆ ಸೈ" ಅನ್ನುತ್ತಿದ್ದರು ದಿನಾ ರಾತ್ರಿ ಮಲಗೋಕ್ ಮುಂಚೆ ಕುಂಡದ ಕುಂಬಳಕ್ಕೆ ನೀರು ಬಿಡುತ್ತಾ ಹುಲುಸಾಗಿ ಮಹಡಿ ಮೇಲೆಲ್ಲಾ ಹಬ್ಬಿ ಈಗಾಗಲೇ ಹೂ ಬಿಟ್ಟಿದ್ದ ಬಳ್ಳಿಯ ಎಲೆಗಳನ್ನು ಸವರುತ್ತಾ "ಎಂಥಾ ಭೂಮಿ! ಚಿನ್ನ ಚಿನ್ನ ಆದ್ರೇನ್ಮಾಡೋದು, ಜನ ಕೇಳ ಒಲ್ಲರು. ಎಲ್ಲರಿಗೂ ತೆಂಗು, ಮಾವೇ ಬೇಕು.

ನೆಟ್ಟು ನೀರ್ಬಿಟ್ಟರೆ ತಲೆ-ತಲೇನೂ ತಿನ್ಬೇಕೊಂತಾರಲ್ಲ!" ಎಂದು ಚಿಂತಿಸುತ್ತಿದ್ದನು. ಕನಸಿನಲ್ಲೂ ಸೊಪ್ಪು ಸದೆಗಳೇ.

ಒಂದು ದಿನ ಮುಂಜಾನೆ ಕೇಂದ್ರದಿಂದ ಲಾರಿಯಲ್ಲಿ ನೂರು ತೆಂಗು. ನೂರು ಹಲಸಿನ ಸಸಿಗಳು ಕೊಳ್ಳೇಗಾಲಕ್ಕೆ ಬಂದವು. ಹನುಮನ ವೈಭವ ಹೇಳತೀರದು. ಲಾರಿಯನ್ನು ಹತ್ತಿ ತೆಂಗಿನ ಸಸಿಗಳನ್ನು ತಬ್ಬಿ ಕೆಳಗಿರಿಸಿಕೊಳ್ಳತೊಡಗಿದನು, ಕೆಳಗಿರಿಸಿಕೊಳ್ಳುತ್ತಿದ್ದಂತೆಯೇ ಊರಿನ ಹತ್ತು ಸಮಸ್ತರು ಹತ್ತತ್ತು ಸಸಿಗಳನ್ನು ಹೊತ್ತು ಹೊರಸಿಕೊಂಡು ನಡೆದರು. ಲಾರಿಯಿಂದ ಕೆಳಕ್ಕೆ ಇಳಿದಾಗ ಹನುಮ ಕಂಡುದು ಹತ್ತು ಹಲಸಿನ ಸಸಿಗಳನ್ನು, ಊರಿನ ನೂರು ಜನರನ್ನು.

"ಲೋ ಹನುಮಾ ಸಸಿ ಕೊಡಿಸ್ತೀನೀಂತ ಆಸೆ ಹುಟ್ಸಿ ತೋಟದಲ್ಲೆಲ್ಲಾ ಹಳ್ಳ ತೋಡಿಸ್ದೆ, ನಿನ್ನ ಹೂಳೋಕೇನಾ? ಸರ್ಕಾರದ ಸಂಬ್ಳ ಇದ್ಕೇನಾ ತಿನ್ನೋದು? ಗುರುತ್ಕಂಡವರಿಗೆಲ್ಲಾ ಹಂಚೋಕೆ ಇದೇನ್ ನಿನ್ನ ಅಪ್ಪಂದೇನೋ?" ಎಂದು ಕಿರುಚಿದ ಖಸಾರಿ.

"ಹಲ್ಸಿನ ಸಸಿ ಈ ಸಲ ..." ಎಂದು ಹನುಮ ಬೆವರೊರಸಿಕೊಂಡು ಬಾಯ್ಬಿಡುವುದರಲ್ಲಿ ಹಲ್ಸಿನ ಸಸಿ ಹಿತ್ಲಲ್ಲಿ ಹಾಕಿ ದೆವ್ವ ಬರ್‍ಸಕೊಂಡಿಯೋ? ಅಂತ ನೆಗೆದು ಬಿದ್ರು ದೊಡ್ಡಟ್ಟಿ ದಮಾಸೆಯುವರು. ಅಂತೂ ಗಲಾಟೆಯಿಂದ ಪಾರಾಗೋದರಲ್ಲಿ ಹನುಮನಿಗೆ ಸಾಕುಸಾಕೆನಿಸಿತು.. ಅಂದು ರಾತ್ರಿ ಕನಸಿನಲ್ಲೆಲ್ಲಾ ಅವನಿಗೆ ಸೊಪ್ಪು ಸದೆಗಳಿಗೆ ಬದಲು ಮಚ್ಚು ಕೊಡಲಿಗಳೇ ಕಂಡವು. "ನಾಳೆಯಿಂದ ನಂಮ ತೋಟಕ್ಕೆ ಕಾಲಿಟ್ಟೇಯೋ!" ಅಂತ ಮಚ್ ತಿರುಗಿಸುತ್ತಾ ಬಸಾರಿ ಹೇಳ್ತಾ ಇದ್ರೆ, ಕೊಡಲಿ ಕಾವಿನ ಮೇಲೆ ಕೈಯೂರಿ ದಮಾಸೆಯುವರು "ಬಾಪ್ಪ, ನಂಮ್ ಹಿತ್ಲಿಗೆ ಬಾ ಹಳ್ಳ ತೋಡಿದೆ" ಎನ್ನುತ್ತಿದ್ದರು ನಿದ್ದೆಯಲ್ಲಿ ಅಂದು ನಾಲ್ಕಾರು ಬಾರಿ ಕಿರಚಿಕೊಂಡು ಎದ್ದ. ರಾತ್ರೆಯೆಲ್ಲಾ ಕನವರಿಸುತ್ತಿದ್ದ.

ಬೆಳಿಗ್ಗೆ ಎದ್ದಾಗ 'ಸಾಕು ಈ ಊರು. ಏನಾದರೂ ಮಾಡಿ ಈ ಊರು ಬಿಡಬೇಕು." ಎಂದು ನಿರ್ಧರಿಸಿಯೇ ಬಿಟ್ಟ. ಮಲೆನಾಡಾದರೂ ಸರಿ, ಮಲೇರಿಯಾ ಆದರೂ ಸರಿ, ಈ ಊರು ಮಾತ್ರ ಬೇಡ ಎಂದುಕೊಂಡ. ಅಷ್ಟರಲ್ಲಿ ಪ್ರಧಾರಿ ಮಾದೇಶಯ್ಯನವರು ಬಂದರು. ಹಿಂದಿನ ದಿನ ಹತ್ತು ಸಸಿ ಹೊತ್ಹಾಕಿದವರಲ್ಲಿ ಇವ್ರೂ ಒಬ್ರರು. "ಇದೇನ್ ಬಂತಪ್ಪಾ ಗ್ರಹಚಾರ" ಅಂತ ಹನುಮ ಅಂದ್ಕೊಳ್ಳೋವಷ್ಟರಲ್ಲಿಯೇ ಅವರೇ "ಹನುಮಾ, ಏನ್ ಹೆದರಬೇಡ ಕಣಪ್ಪಾ. ಆರೀದವ್ನೂಂತ ಆಳ್ಗೊಂದ್ ಮಾತ್ ಅಂತಾರೆ. ನೆನ್ನೆ ನಾವ್ ಹೋದ್ಮೇಲೆ ಗಲಾಟೆ ಮಾಡ್ದ್ರಂತೆ! ಕಂಪ್ಲೇಂಟ್-ಗಿಂಪ್ಲೇಂಟ್ ಅಂದ್ರಂತೆ. ಅದ್ ಯಾವ ಇಸಮು ನಿನ್ಮೇಲೆ ಮಾತ್ ಎತ್ತಾನೆ ನೋಡ್ತೀನಿ ನಿಮ್ಮ ಅಧ್ಯಕ್ಷರ ಹೆಂಡ್ತಿ ತಂಗೀನ ನಮ್ ತಿಮ್ಮೇಗೌಡ್ರಿಗೆ ಕೊಟ್ಟಿರೋದು, ಅಂದ್ಹಾಗೆ ಮಾವಿನ ಸಸಿಗಳು ಯಾವಾಗ ಬರುತ್ವಪ್ಪಾ? ಇನ್ನೂ ಸ್ವಲ್ಪ ತೆಂಗಿನ ಸಸಿಗಳು ಬೇಕು" ಅಂತಂದ್ರು.

ಹನುಮ ಏನೂ ಮಾತಾಡ್ಲಿಲ್ಲ. ಆದರೆ ಅವರು ಆ ಕಡೆ ಹೋದಾಕ್ಷಣ ಇವನಿಗೇನೋ ಹೊಳೀತು. ನೇರ ತಿಂಮೇಗೌಡ್ರ ಮನೆಗೆ ಹೋದ. ತನ್ನ ಕತೆಯ ನ್ನೆಲ್ಲಾ ಕಳಕಳಿಯಿಂದ ಗೌಡ್ರ ಹತ್ತಿರ ಹೇಳ್ಕೊಂಡು, ಅವರ ಪತ್ನೀಯವರ ಹತ್ತಿರ ಹೇಳ್ಸಿ ಹೇಗಾದ್ರೂ ಮಾಡಿ ಬೇರೆ ಕಾಡಿಗಾದರೂ ಸರಿ, ಹಾಕಿಸ್ಬಿಡಿ ಎಂದು ಬೇಡಿದ. ತಿಂಮೇಗೌಡ್ರು ಭಾಳ ಒಳ್ಳೇ ವ್ಯಕ್ತಿ. ಈ ತರಹ ಪ್ರಸಂಗಗಳಲ್ಲಿ ಹಿಂದುಳಿದ ವ್ಯಕ್ತಿಯೇ ಅಲ್ಲ. "ಅದ್ಕೇನಪ್ಪ ಅದೇನ್ ದೊಡ್ಡ ಸಹಾಯ ಹೇಳು. ಸಂಜೆಗೆ ಬಾ" ಅಂದ್ರು.

ಸಂಜೆ ಹೋದಾಗ ಪೇಟೆಯಿಂದ ಮೆಣಸು, ಜೀರಿಗೆ ತರ್ಸಿದರು. ಮತ್ತೆ ಬೆಳಗ್ಗೆ ಸಂಜೆ ಹೀಗೇ ತಿಂಗಳುರುಳಿತು. ಇತ್ತೀಚೆಗೆ ಫೀಲ್ಡ್‌ಮನ್ ಹನುಮನ ಫೀಲ್ಡೆಲ್ಲಾ ತಿಂಮೆಗೌಡ್ರ ಕಾಂಪೌಂಡೆ. ರಾತ್ರಿ ಠಿಕಾಣಿಯೂ ಅಲ್ಲೇ. ಅವರ್ಮನೆ ಜಗಲೀಮೇ ಲೇನೇ ಒಂದು ಚಾಪೆ ಹಾಸಿ. ಕಂಬ್ಳಿ ಹೊದ್ದು ಉರುಳಿಕೊಳ್ಳೋದು. ಬೆಳಗ್ಗೆ ಹೊತ್ತಿಗೆ ಮುಂಚೆ ನೀರೊಲೆಗೆ ಉರಿ ಹಾಕಿ ತಿಂಡಿ ತಿನ್ನೋಕೆ ಹೋಟಲಿಗೆ ಹೋಗು ತ್ತಾನೆ. ಮತ್ತೆ ಗೌಡ್ರ ಮನೆಗೆ ಹೋಗಿ ಗಿಡಗಳಿಗೆಲ್ಲಾ ನೀರು ಬಿಟ್ಟು, ಅದೂ ಇದು ಸುತ್ ಕೆಲ್ಸ ಮಾಡಿಕೊಟ್ಟು ಪೇಟೆ ಹೋಟಲಿಗೆ ಊಟಕ್ಕೆ ಹೊರಡುತ್ತಾನೆ. ಸಂಜೆ ಒಂದ್ಸಲ ತಿಂಮೆಗೌಡ್ರ ಹತ್ತಿರ ತನ್ನ ವಿಚಾರ ತೆಗಿತಾನೆ. ಗೌಡ್ರದು "ಖಂಡಿತ ಖಂಡಿತ ...ಆಗಲಿ....ಆಗಲಿ" ಅಂತ ಉತ್ತರ.

ಒಂದು ಸಂಜೆ ಸುಮಾರು ಏಳು ಏಳೂವರೆ ಹೊತ್ತಿಗೆ ಹನುಮ ಗೌಡ್ರ ಮನೆಗೆ ಪೇಟೆಯಿಂದ ಸಾಮಾನ್-ಗೀಮಾನೇನಾದ್ರು ತರೋದಿದೆಯಾ ಎಂದು ವಿಚಾರಿಸ ಲಿಕ್ಕೆ ಬಂದಾಗ, ಒಳಗಡೆಯಿಂದ ಅಮ್ಮಾವ್ರು "ಹನುಮ ಭಾಳ ಚೆನ್ನಾಗಿ ಸುತ್‌ಕೆಲ್ಸ ಮಾಡ್ತಾನೇರಿ. ಅವ ಬಂದಮೇಲೆ ನನ್ನ ಮುಕ್ಕಾಲು ಪಾಲು ಕೆಲ್ಸ ಕಡಿಮೆ ಆಗಿದೆ. ಅವನ್ನ ಅಲ್ಲೇ ಇರಿಸ್ಕೋಬೇಕು" ಅಂತ್ಹೇಳ್ತಿದ್ರು.

"ಅದೇನೋ ಟ್ರಾನ್ಸ್‌ಫರ್ ಅಂತಲ್ಲೇ... ಇರಲಿ ಬಿಡು....ಇಲ್ಲೇ ಆದಷ್ಟು ದಿನ .." ಅಂತ ಗೌಡ್ರು ಮಾತು ಮುಂದುವರಿಸಿದರು.

ಹನುಮ ಮುಂದೆ ಕೇಳಿಸಿಕೊಳ್ಳಲಿಲ್ಲ, ತನಗೆ ಕವಿದಿದ್ದ ಅದಾವುದೋ ಮಬ್ಬು ಹರಿದಂತೆ ಭಾಸವಾಯಿತು. ನೇರ ಕ್ವಾರ್ಟರ್ಸ್‌ಗೋಡಿದ. ಗೋಡೆಗೆ ನೇತು ಹಾಕಿದ್ದ ಚಿತ್ರಗಳನ್ನೆಲ್ಲಾ ಕಿತ್ತು ಪೆಟ್ಟಿಗೆಗೆ ಸೇರಿಸಿದ ಸೊಂಪಾಗಿ ಬೆಳೆದಿದ್ದ ಕುಂಬಳದ ಬಳ್ಳಿಯನ್ನು ಬುಡಕ್ಕೆ ತರಿದು, ಬಳ್ಳಿಯಲ್ಲಿ ನೇತಾಡುತ್ತಿದ್ದ ಭಾರಿ ಭಾರಿ ಕೂಷ್ಮಾಂಡಗಳನ್ನು ಕಿತ್ತು ಕ್ವಾರ್ಟರ್ಸ್‌ನ ಗೋಡೆಗಳಿಗೆ ಬಚ್ಚಿ ಕೈಮುಗಿದ. ತೋಟ ಗಾರಿಕೆಗೆ ಅದೇ ಅವನ ಕೊನೆಯ ನಮಸ್ಕಾರವಾಯಿತು. ಮಾರನೆಯ ಬೆಳಗ್ಗೆ ಮೊದಲ ಬಸ್ಸಿನಲ್ಲಿ ತನ್ನ ಊರಿಗೆ ಹಿಂತಿರುಗಿ, ಅಧ್ಯಕ್ಷರಿಗೆ ರಾಜೀನಾಮೆಯ ಪತ್ರ ವನ್ನು ಅಂಚೆಯಲ್ಲಿ ಹಾಕಿದ.

—ಕೊಳ್ಳೇಗಾಲದ್ಮಾರಾಮಾನುಜ

ಮಾಜಿಯವರ ಕ್ಲಬ್ಬಿನಲ್ಲಿ

ಪ್ರಕಾಶ್.

ಪಿಸುಮಾತಿನಲ್ಲಿ ಮಾಜಿ ರೆವಿನ್ಯೂ ಕಮಿಷನರವರು ಪಕ್ಕದ ಸೋಫಾದಲ್ಲಿ ಒರಗಿದ್ದ ಮಾಜಿ ಅಕೌಂಟೆಂಟ್ ಜನರಲ್‌ರವರನ್ನು ಕೇಳಿದರು.

"ಅಯ್ಯಾ, ಎ. ಜಿ. ಓದುಕ್ಕೆ ತೆಗದುಕೊಂಡ ಪತ್ರಿಕೆ ಬಂಗಾಳಿ ಭಾಷೆಯಲ್ಲಿ ಅಚ್ಚಾದಂತಿದೆ, ನೋಡು" ಎಂದು ತಮ್ಮ ಕೈನಲ್ಲಿದ್ದ ಪತ್ರಿಕೆಯನ್ನು ಆತನ ಮುಂದೆ ಇಡುತ್ತಾ. ಸೋಫಾದ ಆಳದಿಂದ ಸ್ವಲ್ಪ ಮುಂದಕ್ಕೆ ಬಗ್ಗಿ ಮಾಜಿ ಎ. ಜಿ. ಪತ್ರಿಕೆಯನ್ನು ನೋಡಿ, "ಇದು ಬಂಗಾಳಿ ಇದ್ದಹಾಗಿಲ್ಲ, ಚೀಣೀ ಇರಬಹುದು. ತಡಿ. ನನ್ನ ಪತ್ರಿಕೆ ನೋಡ್ತೀನಿ" ಎಂದು ಹೇಳಿ ಸೋಫಾದ ಪಕ್ಕದಲ್ಲಿದ್ದ ಸಣ್ಣ ಮೇಜಿನ ಮೇಲಿನಿಂದ ತನ್ನ ಪತ್ರಿಕೆಯನ್ನು ತೆಗೆದು "ಹೌದಲ್ಲಾ, ಆರ್. ಸಿ. ಓದುಕ್ಕೆ ತೆಗೆದುಕೊಂಡ ನನ್ನ ಪತ್ರಿಕೆಯೂ ಯಾವುದೋ ಪರಭಾಷೆಯಲ್ಲಿ ಅಚ್ಚಾಗಿದೆ" ಎಂದು ಉದ್ಗಾರ ತೆಗೆದರು.

ಅಷ್ಟು ಹೊತ್ತಿಗೆ ಮಾಜಿ ಜಡ್ಜಿಯವರು ಕ್ಲಬ್ಬಿಗೆ ಬಂದರು. ಎ. ಜಿ. ಯವರು ಅವರನ್ನು ಕರೆದು, ಪತ್ರಿಕೆಗಳನ್ನು ತೋರಿಸಿ, ಇದು ಯಾವ ಭಾಷೆ ಗೊತ್ತೆ? ಇದು ಹೇಗೆ ನಮ್ಮ ಕ್ಲಬ್ಬಿಗೆ ಬಂತು? ದೇಶದಲ್ಲಿ ಬುಡ ಮೇಲು ಮಾಡುವ ಚಳುವಳಿಗಾರರು ಯಾರಾದರೂ ಈ ರೀತಿ ಮಾಡಿರಬಹುದೇ? ಎಂದು ಕೇಳಿದರು.

ಎದುರು ಸೋಫಾದಲ್ಲಿ ಮಾಜಿ ಜಡ್ಜಿಯವರು ಸಾವಧಾನವಾಗಿ ಕುಳಿತು ಮೂಗಿನ ಅರ್ಧಕ್ಕೆ ಕನ್ನಡಕವನ್ನು ಸರಿಕೂರಿಸಿ ಪತ್ರಿಕೆಗಳನ್ನು ಅಜಮಾಯಿಷಿ ಮಾಡುಕ್ಕೆ ಶುರುಮಾಡಿದರು. ಹಿಂದು ಮುಂದು ತಲೆ ಕೆಳಗುಮಾಡಿ ಪತ್ರಿಕೆಗಳನ್ನು ಪರೀಕ್ಷೆ ಮಾಡಿದ ನಂತರ "ನೀನು ಹೇಳೋದು ನಿಜ. ಎ. ಜಿ. ಯಾವುದೋ ಹೊರದೇಶದವರು ಈ ಪತ್ರಿಕೆಗಳನ್ನು ನಮ್ಮ ದೇಶಕ್ಕೆ ಕಳಿಸಿದ್ದಾರೆ. ಅಂಚೆಯವನ ಅಜಾಗರೂಕತೆಯಿಂದ ಇವೆಲ್ಲಾ ನಮ್ಮ ಕ್ಲಬ್ಬಿಗೆ ಬಂದಿದೆ. ಪರಭಾಷಾ ಪತ್ರಿಕೆಗಳು ಇಲ್ಲಿಗೆ ಬರುತ್ತವೆ ಎಂದ ಮೇಲೆ ಪರದೇಶದಿಂದ ಹಣದ ಸಹಾಯವೂ ಇಲ್ಲಿ ಯಾರಿಗೋ ಬರುತ್ತಿರಬೇಕು. ಈಗಿನ ಪರಿಸ್ಥಿತಿ ನೋಡಿದರೆ ಕಮ್ಯೂನಿಸ್ಟ್ ದೇಶಗಳಿಂದಲೇ ಈ ಪ್ರಚಾರ ಪತ್ರಿಕೆಗಳು ಬರುತ್ತಿರಬೇಕು. ಇದರ ಪೂರ್ಣ ತನಿಖೆ ಮಾಡಲೇ ಬೇಕು" ಎಂದು ತಮ್ಮ ತೀರ್ಪನ್ನಿತ್ತರು.

ಆ ವೇಳೆಗೆ ಕ್ಲಬ್ಬಿನ ಹೆಬ್ಬಾಗಿಲಿನಲ್ಲಿ ಕುದುರೆ ಕೆನೆದ ಶಬ್ದವಾಯಿತು. ಮಾಜಿ ಎಂ. ಜಿ. ಯವರು "ಪೋಲೀಸ್ ಮಾಜಿ ಐ ಜಿ ಬಂದ ಹಾಗಿದೆ" ಎಂದರು.

ಅವರ ಊಹೆ ಸತ್ಯವಾಯಿತು. ಮಾಜಿ ಐ ಜಿ ಪಿ ಯವರು ಸಾಕ್ಷಾತ್ ಕಾಣಿಸಿಕೊಂಡರು. ಮಾಜಿ ಜಡ್ಜಿಗಳು ಅವರನ್ನು ಕರೆದು "ಅಯ್ಯಾ ಐ ಜಿ ಈ ಪತ್ರಿಕೆಗಳನ್ನು ನೋಡು: ಯಾವುದೋ ಮಹತ್ತರ ಸಂಚು ಇವುಗಳಿಂದ ಬಹಿರಂಗವಾಗಬಹುದು? ಎಂದು ಹೇಳಿದರು. ಮಾಜಿ ಐ ಜಿ ಪಿ ಯವರು ಪತ್ರಿಕೆಗಳನ್ನು ನೋಡಿ "ಇವು ಯಾವ ಭಾಷೆ ಅನ್ನೋದು ತಿಳಿಯಲ್ಲ. ತಮಿಳು ಇದ್ದ ಹಾಗೂ ಇದೆ, ಮಲೆಯಾಳದ ಛಾಯೆಯೂ ಇದೆ, ಗ್ರೀಕಿನ ಲಕ್ಷಣಗಳೂ ಇವೆ." ಎಂದು ನುಡಿದರು. "ಚೀಣೀ ಭಾಷೆ ಇರಬೇಕಯ್ಯ, ಕಮ್ಯೂನಿಸ್ಟರು ಕಳಿಸಿರಬೇಕು ನಮ್ಮೂರಿನಲ್ಲಿ ಕೂಡ ದಾಂಗೆ ಎದುರಪಕ್ಷದವರಿಲ್ಲವೇ? ಅವರಿಗೆ ಕಳಿಸಿರಬೇಕು ಅಪ್ಪಿ ತಪ್ಪಿ ನಮ್ಮ ಕೈ ಸೇರಿದೆ. ದೇಶದ್ರೋಹ, ರಾಷ್ಟ್ರದ್ರೋಹ, ಇವೆಲ್ಲವನ್ನೂ ಮಾಡಲು ಸೂಚನೆಗಳನ್ನು ಕೊಟ್ಟಿರಬೇಕು." ಎಂದು ಮಾಜಿ ಜಡ್ಜಿಯವರು ಸವಾಲು ಹಾಕಿದರು. ಮಾಜಿ ಐ ಜಿ ಅಷ್ಟು ಸುಲಭವಾಗಿ ಜಡ್ಜಿಗೆ ಬಗ್ಗುವ ಕುಳವಲ್ಲ. ಸ್ವಲ್ಪ ಬಿರುಸಾಗಿಯೇ ನಕ್ಕು "ಮಾಜಿ ಜಡ್ಜಿ ಇಷ್ಟೂ ತಿಳಿಯಲ್ಲವೇ? ಚೀಣಿ ಭಾಷೆಯಲ್ಲಿ ಅಕ್ಷರಗಳನ್ನು ಒಂದರ ಕೆಳಗೆ ಒಂದನ್ನು ಬರೆದು ಪಂಕ್ತಿ ಮಾಡುತ್ತಾರೆ. ಆ ದೇಶದಲ್ಲಿ ಎಲ್ಲವೂ ಹಾಗೆ. ಮಿಕ್ಕ ದೇಶಗಳಲ್ಲಿ ಅಡ್ಡಡ್ಡಲಾಗಿರುವುದನ್ನೆಲ್ಲಾ ಅವರು ಉದ್ದುದ್ದವಾಗಿ ರಚಿಸುತ್ತಾರೆ, ಇತರ ದೇಶಗಳಲ್ಲಿ ಉದ್ದುದ್ದವಾಗಿರುವುದನ್ನೆಲ್ಲ ಅಲ್ಲಿ ಅಡ್ಡಡ್ಡಲಾಗಿ ಇಡುತ್ತಾರೆ. ಈ ಪತ್ರಿಕೆಗಳಲ್ಲಿ ಪಂಕ್ತಿಗಳೆಲ್ಲಾ ಅಡ್ಡಡ್ಡಲಾಗಿವೆ. ಅಂದರೆ ಇವು ಚೀಣಾದ್ದಲ್ಲ. ರಷ್ಯಾದಿದ್ದರೂ ಇರಬಹುದು, ಅಥವಾ ಆಲ್ಬೇನಿಯಾದ್ದಾದರೂ ಆಯಿತು. ಏನೇ ಆಗಲಿ ಈ ವಿಷಯವನ್ನು ಕೂಲಂಕಷವಾಗಿ ವಿಚಾರಿಸಬೇಕು ಕ್ಲಬ್ಬಿನ ಕಾರ್ಯದರ್ಶಿಯನ್ನು ವಿಚಾರಿಸೋಣ ಎಲ್ಲಿಂದ ಬಂತು ಈ ಪತ್ರಿಕೆಗಳು? ಯಾಕೆ ಬಂತು? ಹೇಗೆ ಬಂತು? ಅಂತ." ಎಂದು ಸಲಹೆ ಮಾಡಿದರು.

ಮಾಜಿ ಆರ್. ಸಿ. ಅವರೇ ಕಾರ್ಯದರ್ಶಿಗೆ ಕರೆಕಳಿಸಿದರು. ಆತ ಮೂರು ದಿನದ ರಜದ ಮೇಲೆ ಹೋಗಿದ್ದಾನೆಂದೂ, ಆತನ ಕೆಲಸವನ್ನೆಲ್ಲ ಕ್ಲಬ್ಬಿನ ಅಧ್ಯಕ್ಷರೇ ತಾತ್ಕಾಲಿಕವಾಗಿ ನೋಡಿಕೊಳ್ಳುತ್ತಿದ್ದಾರೆಂದೂ, ಸೇವಕ ಬಂದು ಹೇಳಿದ.

ಮಾಜಿ ಜಡ್ಜಿ, ಎ.ಜಿ ಐ ಜಿ ಮತ್ತು ಆರ್. ಸಿ. ಎಲ್ಲರೂ ಮೆರವಣಿಗೆಯಲ್ಲಿ ಪತ್ರಿಕೆಗಳನ್ನು ಹಿಡಿದುಕೊಂಡು ಅಧ್ಯಕ್ಷರ ಕೊಠಡಿಗೆ ಲಗ್ಗೆ ಹಾಕಿದರು. ಅಧ್ಯಕ್ಷರು ಮಾಜಿ ಮುಖ್ಯ ಇಂಜಿನಿಯರು ಸ್ಕೇಲು, ಸ್ಲೈಡ್ ರೂಲು ಹಿಡಿದೇ ಕೆಲಸಮಾಡುವ ಅಭ್ಯಾಸ. ಮಾಜಿ ಜಡ್ಜಿಗಳ ಮುಂದಾಳುತನದಲ್ಲಿ ವಿಷಯವನ್ನು ತಿಳಿಸಿದಾಗ, ಅಧ್ಯಕ್ಷರು ಪತ್ರಿಕೆಗಳನ್ನು ಹಿಡಿದು ಸ್ಕೇಲಿನಿಂದ ಅಳತೆಮಾಡಿ ವೀಕ್ಷಿಸಲು ಪ್ರಾರಂಭಿಸಿದರು.

"ನಮ್ಮ ಕ್ಲಬ್ಬಿಗೇ ಕೆಟ್ಟ ಹೆಸರು ಬಂದುಬಿಡುತ್ತೆ. ಸುಮಾರು ಜನ ಸದಸ್ಯರು ವಿಶ್ರಾಂತಿ ವೇತನ ಪಡೆಯುತ್ತಿದ್ದಾರೆ. ರಾಷ್ಟ್ರ ದ್ರೋಹದ ಅನುಮಾನ ಬಂದರೂ ನಮಗೆಲ್ಲಾ ತೊಂದರೆಯೇ! ಇದನ್ನು ಖುದ್ದಾಗಿ ನಾನೇ ತಲಾಷ್ ಮಾಡುತ್ತೇನೆ" ಎಂದು ಅಭಯ ವಚನ ನುಡಿದು, ಕ್ಲಬ್ಬಿನ ನೌಕರನನ್ನು ಕರೆದು, "ಯಾರಯ್ಯಾ! ನಮ್ಮ ಕ್ಲಬ್ಬಿಗೆ ಪತ್ರಿಕೆಗಳನ್ನು ಸರಬರಾಜು ಮಾಡುತ್ತಿದ್ದಾರೆ" ಎಂದು ಕೇಳಿದರು.

ಅವ "ಪಂಡಿತ್ ಪುಸ್ತಕ್ ಭಂಡಾರ್ ಅವರು" ಎಂದ.

ಅಧ್ಯಕ್ಷರು ಪಂಡಿತ್ ಪುಸ್ತಕ್ ಭಂಡಾರ್‌ಗೆ ಫೋನ್ ಮಾಡಿದರು. "ಮಾಜಿ ಯುವರ ಕ್ಲಬ್ಬಿಗೆ ಇವತ್ತು ನಿನ್ನೆ ಯಾವುದೋ ಪರಭಾಷಾ ಪತ್ರಿಕೆಗಳು ಇಲ್ಲಿಗೆ ಕಳಿಸಲ್ಪಟ್ಟಿವೆ ಯಾಕೆ ಕಳಿಸಿದಿರಿ? ಎಂದು ಕೇಳಿದರು ಉತ್ತರ ಕೇಳಿ ಬಿಸುಚಿ ಕೊಂಡು ಸುಸ್ತಾದರು.

ಆ ಮೇಲೆ ಸುಧಾರಿಸಿಕೊಂಡು ಮಾಜಿ ಜಡ್ಜಿ ಮತ್ತು ಸಂಗಡಿಗರಿಗೆ ಹೇಳಿದರು. "ನಮ್ಮ ಕ್ಲಬ್ಬು ಪರಭಾಷಾ ಪ್ರವೀಣರ ಕ್ಲಬ್ಬು ಅಂತ ಅವರು ತಿಳಿದುಕೊಂಡಿದ್ದರಂತೆ. ಕಳೆದ ಹತ್ತು ವರ್ಷಗಳಿಂದಲೂ ಇದನ್ನೇ ಕಳಿಸುತ್ತಿದ್ದಾರಂತೆ. ಮೊದಲೇ ಯಾಕೆ ತಕರಾರು ಮಾಡಲಿಲ್ಲ" ಎಂದು ಹೇಳಿದರು



ಸಾರ್! ಮಧ್ಯಾಹ್ನದ ಊಟದ ರೇಷನ್ ಕೊಟ್ಟರೆ ಮನೆಯಲ್ಲೇ ರುಚಿಯಾಗಿ ಅಡಿಗೆ ಮಾಡಿಸಿ ತಿನ್ನುತ್ತೇವೆ—ಸಾರ್!!

ಈಗ ತುಂಬಾ ಸುಲಭ

ಹೌದು! ಈಗ ಲೇಖಕರಿಗೆ ತುಂಬಾ ಸುಲಭ. ಹಿಂದಿನ ಕಾಲದಲ್ಲಿ ವ್ಯಕ್ತಿಯೊಬ್ಬನನ್ನು ಬಣ್ಣಿಸಬೇಕಾದರೆ ಲೇಖಕನಿಗೆ ತುಂಬಾ ತ್ರಾಸು ಆಗುತ್ತಿತ್ತು

ವ್ಯಕ್ತಿಗೆ ಮಧ್ಯವಯಸ್ಸು. ಬಯಸಿದ್ದನ್ನು ಗಿಟ್ಟಿಸಿಕೊಳ್ಳುತ್ತೇನೆ ಎಂಬ ಆತ್ಮವಿಶ್ವಾಸದ ವರ್ಚಸ್ಸು ಅವನ ಮುಖದ ಮೇಲಿದೆ. ಅದಕ್ಕೆ ತಕ್ಕ ಬೆಂಬಲವೂ ಸಮಾಜದಲ್ಲಿ ಅವನಿಗೆ ದೊರೆಯುತ್ತದೆ. ಏಕೆಂದರೆ ಅವನು ಅಂಚೆ ಭಕ್ಷಿಯವರ ಅಳಿಯ ಅರಸರಿಗೆ ಅವನ ಮೇಲೆ ಪ್ರೇಮ ಹೀಗೆಲ್ಲಾ ಪುಟಗಟ್ಟಲೆ ಬರೆಯಬೇಕಾಗಿತ್ತು

ಈಗಿನ ಕಾಲದ ಲೇಖಕನು ಒಂದೇ ಪಂಗ್ತಿಯಲ್ಲಿ ಮುಗಿಸಿಬಿಡಬಹುದು—ಅವನು ಗರಿಗರಿ ಟೋಪಿಯನ್ನು ಅರ್ಧ ವಾರೆಯಾಗಿ ತಲೆಯ ಮೇಲೆ ಹಾಕಿಕೊಂಡಿದ್ದ ಹೋರಿಯಂತಿದ್ದ. ಅಂತ ಬರೆದರೆ ಸಾಕು. ಅವನು ಯಾವ ರಾಜಕೀಯ ಪಕ್ಷದವನು. ಆ ಪಕ್ಷದಲ್ಲಿ ಗರಿಗರಿ ಟೋಪಿ ಧರಿಸಬೇಕಾದರೆ ಮಂಡಳ ಪ್ರಾತಿನಿಧ್ಯವನ್ನಾದರೂ ಹೊಂದಿರಲೇ ಬೇಕು. ಟೋಪಿಯು ಎಷ್ಟು ವಾರೆಯಾಗಿರುತ್ತದೋ ಅದನ್ನು ನೋಡಿ ಪಕ್ಷದಲ್ಲಿನ ಅವನ ಅಂತಸ್ತನ್ನು ಕಂಡು ಹಿಡಿಯಬಹುದು. ಅರ್ಧ ವಾರೆ ಅಂದರೆ ಉಪಸಚಿವ ಸ್ಥಾನಕ್ಕೆ ಖಂಡಿತ. ಇವೆಲ್ಲವೂ ತಿಳಿದುಹೋಗುತ್ತೆ

"ಹಾಕಿಕೊಂಡಿದ್ದ ಮಾಸಲ ಟೋಪಿಯು ಇಸ್ತ್ರಿಯನ್ನು ಕಂಡು ಸುಮಾರು ಜನ್ಮಗಳಾಗಿದ್ದಿರಬೇಕು" ಎಂದು ಈಗಿನ ಲೇಖಕನು ಬರೆದರೆ ಸಾಕು. ವ್ಯಕ್ತಿಯ ಚಿತ್ರ ಸ್ಫುಟವಾಗಿ ಕಣ್ಣೆದುರಿಗೆ ನಿಲ್ಲುತ್ತೆ. ಅವನ ಹಿಂದಿನ ಚರಿತ್ರೆಯೆಲ್ಲಾ ವಿಶದವಾಗುತ್ತೆ. ಆವ ಪಕ್ಷದ ಸದಸ್ಯರ ಬೆಂಬಲವನ್ನು ಪಡೆದಿಲ್ಲ ಅವನ ಬಾಯಿ ದೊಡ್ಡದಾಗಿಲ್ಲ. ಕೇಕಲ ಧ್ವನಿ ಇರಬೇಕು ಪಕ್ಷದ ಸಭೆಗಳಲ್ಲಿ ಈ ಅಲ್ಪಪ್ರಾಣಿ ಹಿಂದೆಲ್ಲೋ ನಿಂತುಕೊಂಡು ಗುಂಪಿನಲ್ಲಿ ಗೋವಿಂದಾ ಅಂದ ಹಾಗೆ ಗಾಂಧೀಕಿ ಜೈ ಕೂಗುವ ಆಸಾಮಿ ದೊಡ್ಡವರಿಗೆ ಹಾಕಿದ ಹಾರಗಳನ್ನು, ಅವರು ತೆಗೆದು ಕೊಟ್ಟಾಗ ಇವ ಹಿಂದೆ ಇದ್ದು ಇಸಕೊಳ್ಳುತ್ತಾನೆ. ಪಕ್ಷದ ಕಚೇರಿಗಳಲ್ಲಿ ಚಾಪೆ

ಹಾಸುವುದು, ಯಾರಾದರೂ ನಾರೆ ಗರಿ ಟೋಪಿಯವರು ಬಂದರೆ ಚಾಪೆ ಕೆಳಗೆ ನುಸುಳುವುದು, ವಾರ್ಷಿಕ ಸಭೆ ಸೇರಿದಾಗ ಸ್ವಯಂ ಸೇವಕನಾಗುವುದು, ಇದೇ ಇವನ ಮೋಕ್ಷ ಹಿರಿಯ ಸಾಧನೆ ಎಂದು ತಿಳಿದೇ ಹೋಗುತ್ತೆ.

ಟೋಪಿಯನ್ನು 'ಯಾವಾಗಲೂ ಕೈನಲ್ಲಿ ಹಿಡಿದುಕೊಂಡು ಆಡಿಸುತ್ತಲೇ ಇರುವ ಚಾಳಿ ಅವನಿಗೆ, ಎಂದು ಈಗಿನ ಲೇಖಕನು ಬರೆದರೆ ತೀರಿತು, ಆಸಾಮಿ ಚೂಟಿ, ಇನ್ನೊಬ್ಬರ ತಲೆಯನ್ನು ಬೋಳಿಸಿ ಸಾರಿಸಿ ರಂಗೋಲಿ ಇಟ್ಟು ಅದರ ಮೇಲೆ ಟೋಪಿ ಹಾಕಿ ಯಾರಿಗೂ ತಿಳಿಯದ ಹಾಗೆ ತನ್ನ ಧಕಾಯ್ತಿಯನ್ನು ಮುಗಿಸುತ್ತಾನೆ. ಅದಕ್ಕೇ ಟೋಪಿಯನ್ನು ಸದಾ ಸಿದ್ಧವಾಗಿ ಬಿಚ್ಚಿದ ಕತ್ತಿಯಂತೆ ಹಿಡಿದಿರುತ್ತಾನೆ. ಮಸಲಾ ಯಾರಾದರೂ ಇವನಿಗೇ ಟೋಪಿ ಹಾಕುವ ಹಾಗಾದರೆ ತತ್‌ಕ್ಷಣ ತನ್ನ ಟೋಪಿಯನ್ನು ತನ್ನ ತಲೆಗೆ ಹಾಕಿಕೊಂಡು ಮುಂಜಾಗ್ರತೆ ವಹಿಸುತ್ತಾನೆ ಅಷ್ಟು ಹುಷಾರು ಆಸಾಮಿ ಅಂತ ಸುಲಭವಾಗಿ ತಿಳಿಯುತ್ತೆ.

ಅರ್ಧ ಕಾಣಿಸುವಂತೆ ಟೋಪಿಯನ್ನು ಜೇಬಿನಲ್ಲಿ ಇಟ್ಟುಕೊಂಡಿದ್ದ ಅವ, ಅಂತ ಈಗಿನ ಲೇಖಕ ಬರೆದರೆ ಸಾಕು.

ಅದ್ವಿತ ದಳ್ಳಾಳಿ ವ್ಯಾಪಾರ ಮಾಡುವ ಜಾತಿ. ಚಾಟಿ ಇಲ್ಲದೆ ಬುಗುರಿ ಆಡಿಸುವ ಗೋತ್ರ. ಕಂಡೋರ ಮಾಲನ್ನು ಕಾಣದವರಿಗೆ ಮಾರಿಸಿ ತಾನು ಎರಡೂ ಕಡೆಯಿಂದ ಲಾಭ ಗಿಟ್ಟಿಸುವ ಜಾಣ. ಖಾಲಿ ಜೇಬಿನಲ್ಲಿ ಟೋಪಿ ತುಂಬಿಕೊಂಡು ಅದೇ ದಪ್ಪ ಆಸ್ತಿ ಎನ್ನುವಂತೆ ಹೊರಲೋಕಕ್ಕೆ ಪ್ರಚಾರ ಮಾಡುವ ಚಾಲೂಕಿದೆ. "ಹಳೇ ಲಾರಿಗಳು ಲಾರಿ ಸ್ಮಶಾನದಲ್ಲಿ ಹನ್ನೆರಡಿವೆ. ಅದನ್ನು ನೀವು ಕೊಂಡುಕೊಳ್ಳಿ ಸಾಹುಕಾರ್ರೆ. ಅವಕ್ಕೆ ಎಣ್ಣೆ ಬಣ್ಣ ಮಾಡಿಸಿ ಪ್ರಾಯದ ಕಳೆ ತುಂಬಿ. ಸರ್ಕಾರದ ಇಂತಹ ಇಲಾಖೆಗೆ ೧೨ ಲಾರಿಗಳು ಸ್ಯಾಂಕ್ಷನ್ ಆಗಿದೆ ಆಕಡೆ ಮಂತ್ರಿಗಳೇ ಹೇಳಿದರು" ಎಂದು ಸಾಹುಕಾರರಿಗೆ ಸ್ಮಶಾನದಲ್ಲಿದ್ದ ಲಾರಿಗಳನ್ನು ಮಾರುವಾಗ, ತನ್ನ ಜೇಬಿನಲ್ಲಿರುವ ಟೋಪಿಯನ್ನು ಹಿಸುಕುತ್ತಲೇ ಇರುತ್ತಾನೆ. ಆಮೇಲೆ ಲಾರಿ ಸ್ಮಶಾನಕ್ಕೆ ಹೋಗಿ, ಅಲ್ಲಿನ ಹರಿಶ್ಚಂದ್ರನಿಗೆ, ಈ ಹನ್ನೆರಡು ಲಾರಿಗಳನ್ನು ಸಾಗಿಸಿಬಿಟ್ಟರೆ ಏನು ಕೊಡುತ್ತಿ ಎಂದು ವ್ಯವಹಾರ ನಡೆಸಿ ಬದುಕಿಕೊಳ್ಳುತ್ತಾನೆ, ಇವೆಲ್ಲವೂ ಎಳೆ ಮಕ್ಕಳಿಗೆ ಕೂಡ ತಿಳಿದುಹೋಗುತ್ತೆ.

ಅದಕ್ಕೇ ಹೇಳಿದ್ದು. ಲೇಖಕನ ಕೆಲಸ ಈಗ ತುಂಬಾ ಸುಲಭ ಅಂತ.

—ಕುಮಾರ್.

ಥಿ ಏಟರಿಂದ ಪೆಟ್ಟು ತಿಂದು

ಕೂಡಲಾಗದ ಸೀಟು
ನೋಡಲಾಗದ ಸ್ಕ್ರೀನು
ಷೋಕು ಇಲ್ಲದ ನಟಿಯು
ಷಾಕು ಹೊಡೆಯುವ ನಟರು

ತಲೆಯು ತಿರುಗುವ ಹಾಡು
ಹೊಟ್ಟೆ ತೊಳೆಸುವ ನಾಚು
ಅರ್ಥವಿಲ್ಲದ ಕತೆಯು ವ್ಯರ್ಥವಯ್ಯಾ ಹಣವು

ವೇಳೆ ಕಳೆಯುವ ಬಗೆಯು
ಬೇರೆ ತೋಚದು ಎಂದು
ನುಗ್ಗಿ ನರಳುವ ಬದಲು
ವಿಷದ ಪ ನವೇ ಸುಖವು

ಇನ್ನೊಮ್ಮೆ ಮತ್ತೊಮ್ಮೆ ಎಂದು ಮರುಳಾಗದಿರು
ಈಗಲೇ ಎಚ್ಚೆತ್ತು ನಿನ್ನ ಬಾಳ ಉಳಿಸು

ಓದಲುಂಟೇ

ಕೊಳೆತ ಬಾಳೆಯ ಹಣ್ಣಿನಂದದಿ
ಇಳಿಸಿದುಷ್ಣದ ಕಾಫಿಯಂದದಿ
ಕಳೆದ ಇಸ್ತ್ರಿಯ ಷರ್ಟಿನಂದದಿ ಕಳೆಪೆಯಾಗಿರ್ಪ |
ಲಲನೆಯರ ಚೆಲ್ಲಾಟ ದಶ ಹೆಣ
ಗಳುರುಳಾಟ ಗತ ಸಿರಿಯ ಬೊಬ್ಬೆ
ಇಲ್ಲದ ಕತೆಯ ಓದಲುಂಟೇ ಹೇಳಿ ಶಿವನಾಣೆ ||

—ಟಿ. ಎಸ್. ವೆಂಕೋಬರಾವ್

'ಶ್ರೀರಾಮ ರಕ್ಷೆ'

ಎಂದಾದರೊಮ್ಮೆ ಬಂದೀತು 'ರಾಮರಾಜ್ಯ' ಎಂಬ ಅಂಥ ನಂಬಿಕೆಯಿಂದಲೇ ಶ್ರೀರಾಮನವಮಿಯನ್ನು ನಮ್ಮ ಮನೆಯಲ್ಲಿ ಅದ್ದೂರಿಯಿಂದ ನಡೆಸಿಕೊಂಡು ಬಂದಿದ್ದೇವೆ. ನನಗಿಂತಲೂ ನನ್ನ ಯಜಮಾನ್ತಿ ಇದ್ದಾಳಲ್ಲಾ ಆಕೆ ಸಾಕ್ಷಾತ್ ಶಬರಿಯಂತೆ ಶ್ರೀರಾಮನವಮಿಗೆ ಕಾಯುವಳು. ಮದುವೆಯಾಗಿ ಮನೆಗೆ ಬಂದ ಅವಳು ನಾನು ಪಟ್ಟಾಭಿಷೇಕ ಮಾಡಿಸಿಕೊಂಡು ನಮ್ಮ ಜಮೀನ್ದಾರಿಕೆಯ ರಾಜ್ಯವಾಳುವ ಸಮಯಕ್ಕೆ ಸರಿಯಾಗಿ ಚಿಕ್ಕಮ್ಮ ಅಡ್ಡ ಬಂದಿದ್ದಳು. ಕೈಕೆಯಂತೆ ನಮ್ಮಪ್ಪನನ್ನು ಕಾಡಿದ್ದಳು. ಆದರೆ ಬಹಳ ಚಮತ್ಕಾರವಾಗಿ ರಾಜ್ಯವನ್ನ ತನ್ನ ಮಗ ಬೈರಪ್ಪನಿಗೆ ಆಗುವಂತೆ ಮಾಡಿಕೊಂಡಿದ್ದಳು. ನಮ್ಮಪ್ಪ "ಮಗಾ ಮಿನಿಸ್ಟ್ರು ನನಗೆ ಗೊತ್ತು, ಕೆಲ್ಸಕ್ಕೆ ಸೇರ್ಕಂಡೇಬಿಡು, ಈ ಜಮೀನು ಪಮೀನು ಕೆಲ್ಸಕ್ಕೆ ಬಾರದ ಚಿಕ್ಕೋನು ಬೈರಪ್ಪನೇ ನೋಡ್ಕೊಳ್ಳಿ"—ಎಂದು ಅರಣ್ಯ ಇಲಾಖೆಯಲ್ಲಿ ನನಗೆ ಕೆಲಸ ದೊರಕಿಸಿ ಕೊಟ್ಟು, ಮಲೆನಾಡಿನ ಮೂಲೆಯಲ್ಲಿ ವನವಾಸಕ್ಕೆ ಹೊರಟಂತೆಯೇ ನಾವು ದಂಪತಿಗಳು ಕಾಡು ಸೇರಿದೆವು. ಹದಿನಾಲ್ಕು ವರ್ಷ ಕಾಡೆಲ್ಲ ಅಲೆದು ಮತ್ತೆ ಪಟ್ಟಣದ ಆಫೀಸಿಗೆ ವರ್ಗ ಮಾಡಿಸಿಕೊಂಡು ವಾಪಸ್ಸು ಬಂದ ಮೇಲೆ ನನ್ನಾಕೆ ಬಹು ಭಕ್ತಿಯಿಂದ ಶ್ರೀರಾಮನವಮಿ ಮಾಡುವಳು.

ಅವತ್ತು ಅಷ್ಟೆ. ಬೆಳಿಗ್ಗೆ ಅಸ್ಟು ಹೊತ್ತಿಗೇ ಬುಟ್ಟಿ ಕೈಗೆ ಕೊಟ್ಟು, ಮಾರ್ಕೆಟ್ಟಿಗೆ ಅಟ್ಟಿದ್ದಳು. ನಿಂಬೆಹಣ್ಣು, ಮಾವಿನಕಾಯಿ, ಮೆಣಸಿನಕಾಯಿ, ಕೊತ್ತುಂಬ್ರಿ, ಹಸಿಶುಂಠಿ, ಕರುಬೂಜಾಹಣ್ಣು, ಮುಖ್ಯವಾಗಿ ಮುತ್ತುಗದೆಲೆ, ಎರಡೇ ಎರಡು ತೆಂಗಿನಕಾಯಿ, ದವನ, ಮರುಗ, ಬಾಳೆಹಣ್ಣು, ಮಾವಿನ ಎಲೆ, ಹಲಸಿನ ತೊಳೆ, ಜೇನುತುಪ್ಪ, ನೇರ್ಲೆಹಣ್ಣು, ಚೇಪೇಹಣ್ಣು ಇತ್ಯಾದಿ ಇತ್ಯಾದಿ ವಾನರಗಳಿಗೆ ಜಾಂಬುವಂತನಿಗೆ ಪ್ರಿಯವಾದ ಹಣ್ಣುಗಳನ್ನು ತರಲೇಬೇಕು. ಶ್ರೀರಾಮನವಮಿ ಮಾತ್ರ ಅವಳ ಪಾಲಿಗೆ ಬಹು ಪ್ರಿಯವಾದ ಹಬ್ಬ. ದೇವರದಯ ರಾವಣನ ಕಾಟವಿರಲಿಲ್ಲ.

ಮಾರ್ಕೆಟ್ಟಿನ ಕಡೆಗೆ ಹೊರಟಿದ್ದೆ. ವಾಪಸು ಕೇವಲ ಎರಡು ಗಂಟೆಗಳ ನಂತರ ಹಿಂದಿರುಗಿದ್ದೆ. ತರುವ ಪೂಜೆ, ನೈವೇದ್ಯದ ಪದಾರ್ಥಗಳಿಗೆ ಗೇಟಿನ ಬಳಿಯೇ ಕಾದಿದ್ದಳು ಶಬರಿ.

"ಎಷ್ಟು ಹೊತ್ರೀ ...ಹಬ್ಬದ ದಿನವೂ ದಾರಿ ದಾರಿಯಲ್ಲಿ ಸ್ನೇಹಿತರು ಸಿಕ್ಕು ಮಂಟಪೋತ್ಸವಗಳೇ ಆದವೇನು ?"

—ಎಂದು ಗದುರಿದಳು. ನಾನು ಹಿಡಿದ ಬುಟ್ಟಿಯ ಹಿಡಿ ಬಿಡದೆ "ಹಿಹ್ಹಿಹ್ಹಿ" ಎಂದು ಮೂವತ್ತೆರಡು ಹಲ್ಲುಗಳನ್ನು ಬಿಟ್ಟು ನಿಂತೆ.

"ಸಾಕು ನಿಮ್ಮ ನಗು ಕೊಡ್ರಿ ಈ ಕಡೆ ಆ ಬುಟ್ಟಿ."

—ಬಿರುಸಾಗಿ ಗದುರಿಸಿ ಕೆಂಗಣ್ಣು ಮಾಡಿ ಹೇಳಿದಾಗ ನಾನು ಬೆವತೆ.

ಬೆ – ಬೆ – ಬೆ – ಹೇಳಿದೆ. ಬಲವಂತವಾಗಿ ಬುಟ್ಟಿ ಕಿತ್ತುಕೊಂಡಳು. ಬುಟ್ಟಿಯ ಮುಚ್ಚಳ ತೆಗೆದಳು. ಇಣಿಕಿ ನೋಡಿದಳು. ಬುಟ್ಟಿ ಬಿಸಾಕಿ ಕಿಟ್ಟನೆ ಕಿರುಚಿದಳು. ನಾನು ಬೆದರಿದ ಬಕರನಂತೆ ದೂರ ನಿಂತು ಒರಲಿದ್ದ ಗುಡುಗು ಸಿಡಿಲು, ಆನೇಕಲ್ ಮಳೆಯಂತಹ ವಾಕ್ ಪ್ರಹಾರಕ್ಕೆ ತೆರೆದ ಮುಖವನ್ನು ಕಣ್ಣು ಮುಚ್ಚಿ ಒಡ್ಡಿದ್ದೆ.

ಆ ಬುಟ್ಟಿಯಿಂದ ಹೊರಬಿದ್ದದ್ದು ಏನು ???

ಅವಳು ಬೈಯ್ಯಲಿಲ್ಲ. ಬೆದರಿಸಲಿಲ್ಲ. ಕಣ್ಣೀರು ಹಾಕಿ ಒಳಕ್ಕೆ ಹೋದಳು.

"ಲೇ ಲೇ ಲೇ...." ಎಂದು ನಡೆದ ಸಂಗತಿ ವಿವರಿಸಲು ನಾನೂ ಹಿಂಬಾಲಿಸಿದೆ........

* * * *

"ಇಲ್ಕೇಳೆ ಇಲ್ಲಿ....ಇಲ್ಲಿಂದ ಮಾರ್ಕೆಟ್ಟಿಗೆ ನೀನು ಹೇಳಿದ ಪೂಜೆ—ನೈವೇದ್ಯದ ಸಾಮಾನು ತರಲಿಕ್ಕೆ ಭಕ್ತಿಯಿಂದ ಹೊರಟೆ."

"ಮತ್ತೆ ಈ ನಾಯಿಮರಿ ಏಕೆ ತಂದ್ರಿ...."

"ವಿಷಯ ತಿಳ್ಕೊ .... ಹ್ಯಾಗೂ ಹೋಗ್ತಿದ್ದೀನಲ್ಲಾಂತ ಹಾಗೆ ದಾರೀಲಿ ನಂಜುಂಡಯ್ಯನ ಅಂಗಡೀಲಿಬೆಣ್ಣೆ ಹ್ಯಾಗೆ ಅಂತ ವಿಚಾರಿಸಿದೆ. ಕಾಲು ಕೇಜಿ ಕಟ್ಟಿಸಿದೆ...."

"ಮತ್ತೆಲ್ಲಿ ಬೆಣ್ಣೆ ?"

"ಇದೆ....ಅಲ್ಲೀ....ನಮ್ಮ ಆಫೀಸರ ಮನೇಲಿ."

"........ಸರಿ ನಿಮ್ಮ ಹತ್ರ ಮಾತಾಡೋದೂ ಒಂದೆ, ತಲೆ ಚಚ್ಕೊಳ್ಳೋದೂ ಒಂದೆ...."

"ನಾನು ಹೇಳೋದಾದರೂ ಪೂರಾ ಕೇಳೇ। ಮಹರಾಯ್ತಿ ರಾಮನವಮಿ ದಿನ ಲಂಕಿಣಿ ರೇಗಿದ ಹಾಗೆ ರೇಗಬೇಡ...."

" ಸರಿ ಸರಿ ನೀವು ಶ್ರೀರಾಮನ ಬಂಟ ಹನುಮಂತನ ಹಾಗೇ ನಿಮ್ಮ ಆಫೀಸರು ಸ್ವಾಮಿರಾಯನ ಮುಂದೆ ಕೈ ಮುಗಿದು ನಿಂತ್ರೆ ತಾನೆ ಬೆಳಗಾಗೆದ್ದೂ...."

" ವಿಷಯ ಕೇಳೀ....ಅವರ ಮನೆ ಮುಂದೆ ಹಾದೇ ಮಾರ್ಕೆಟ್ಟಿಗೆ ಹೋಗ ಬೇಕಲ್ಲವೆ? . ಅವರ ಮನೆ ನೋಡುತ್ಲು ಬೆಣ್ಣೆ ನೆನಪಿಗೆ ಬಂತು. ಹಾಗೆ....ಒಳ್ಳೇ ಹಸನಾದ ಕರೀ ಹಸುವಿನ ಬೆಣ್ಣೆ ಡಬ್ಬಾದಲ್ಲಿ ತುಂಬಿದ್ದ. ಅದಿಷ್ಟೂ ಕೊಂಡು ಕೊಂಡು ಬಿಡೋಣವೇ ಅನ್ನುವಷ್ಟು ಸೊಗಸಾಗಿತ್ತು.....ಸೀತಾ, ಸ್ವಾಮಿಗೆ ಬೆಣ್ಣೆ ಕಾಯಿಸಿದ ತುಪ್ಪದ ದೀಪ ಹಚ್ಚಿದರೆ, ಕಣ್ಣು ಬಿಟ್ಟು ನೋಡಿಯಾನು ಮುಂದಿನ ವರ್ಷ ಪೂರಾ ಒಂದು ಕೇಜಿ ಕೊಳ್ಳೋ ಶಕ್ತಿ ಕೊಟ್ಟಾನೂನ್ನೋ ಭಕ್ತಿಯಿಂದ ಕಾಲು ಕೇಜಿ ಕೊಂಡು ಕೊಂಡೆ...."

" ಸಾಕು ಸಾಕು ನಾನು ಕೇಳಲಾರೆ "

"ನೀನು ಕೇಳಲೇಬೇಕು ನನ್ನ ಮಾತು, ಮತ್ತೆ ಯಾರು ಕೇಳಬೇಕೇ....ಕೇಳು ನಾನು ನಿನ್ನ ಮಾತು ಕೇಳೋಲ್ಲವೆ?....ಕೇಳು ಆಫೀಸರೂಂದ್ರೆ ಸ್ವಾಮಿ ರಾಯರೇ ಕಣೆ....ಈ ಕೈಯಲ್ಲಿ ಬುಟ್ಟಿ ಈ ಕೈಲಿ ಬೆಣ್ಣೆ ದೊನ್ನೆ ಇಟ್ಕೊಂಡು ಅವರ ಮನೆ ಮುಂದೆ ನಿಂತೆ—ಸ್ವಾಮಿರಾಯರು ದರ್ಶನ ಕೊಟ್ಟರು. ಶ್ರೀಯುತರು ಗಂಭೀರ ವಾಗಿ ಉಗುರು ಕಡಿಯುತ್ತಿದ್ದರು ನನ್ನ ನೋಡಿ ...ಬನ್ನಿ ಭೀಮಪ್ಪಾ....ಎಂದರು. ಬುಟ್ಟಿ ಕೆಳಗಿಟ್ಟು ಕೈ ಮುಗಿದೆ. " ಅದೇನು? " ಎಂದು ಕೇಳಿದರು. "ಹಿ ಹಿ ಹಿ.... ಸ್ವಾಮಿ ಚಿತ್ತ! ಬೆಣ್ಣೆ ಎಂದೆ ...ಮಿಸ್ಟರ್ ಭೀಮಪ್ಪಾ ...ಶ್ರೀರಾಮ ನವಮಿಯಾದ ಇವತ್ತು ನನಗೆ ಮಹತ್ತರವಾದ ಯೋಚನೆ ಬಂದುಬಿಟ್ಟಿದೆ....ಎಂದು ಅಂಗಳದಲ್ಲಿ ಶಥಪಥ ತಿರುಗಿದರು.

" ಭೀಮಪ್ಪಾ ...ಮನುಷ್ಯನಾದಮೇಲೆ ಅವನಲ್ಲಿನ ಮುಖ್ಯ ಗುಣ ಯಾವುದು? "—ಎಂದು ಕೇಳಿದರು ಸ್ವಾಮಿರಾವ್.

" ಸ್ವಾಮಿ....ಭಕ್ತಿ—ಸ್ವಾಮಿಭಕ್ತಿ ಸಾರ್...."

" ಭೇಷ್ ...ಶ್ರೀರಾಮನಿಗೆ ಆಂಜನೇಯಸ್ವಾಮಿ, ಬಂಟನಾಗಿ ಸೇವೆ ಸಲ್ಲಿಸಿದ್ದು ಕಡಿಮೆ ರಾಮಣ್ಣಾವೇ ?"

" ಅಲ್ಲವೇ...."

" ಹನುಮ, ಭೀಮ, ಮಧ್ವ—ಒಂದೊಂದೂ ಪ್ರಚಂಡ ಅವತಾರಗಳು ಭೀಮಪ್ಪಾ "

" ಹೌದು ಸ್ವಾಮಿರಾಯರೆ "

" ಕಲಿಯುಗದಲ್ಲಿ ನಾವು ಕಲಿಯಬೇಕಾದ್ದು ಸ್ವಾಮಿನಿಷ್ಠೆ ...ನಾನು ಹೀಗಂತೀ ನೀಂತ ಅಲ್ಲ ...ಈ ಕಾಲದಲ್ಲಿ ಮನುಷ್ಯಪ್ರಾಣಿ ಮರೆತಿರೋದನ್ನ ಇತರ ಪ್ರಾಣಿಗಳು ನೆನಪಿಗೆ ತಂದುಕೊಡ್ತಾ ಇವೆ...."

" ಇವೆ....ಇವೆ"

"ಭೀಮಪ್ಪಾ....ಅಂತಹ ಪ್ರಾಣಿಗಳ ಮೇಲೆ ನಾವು ದಯೆ ಇಡಬೇಡವೇ"

"....ಬೇಡವೇ ಸ್ವಾಮಿಗಳೇ"

" ಗುಡ್ ವೆರಿಗುಡ್....ನಿಯತ್ತಿನ ಪ್ರಾಣಿ ಅಂದರೆ ಯಾವುದು ಹೇಳಬಲ್ಲಿರಾ?"

" ಹಿ ಹ್ಹಿ... ಸ್ವಾಮಿ ಈ ಭಕ್ತನನ್ನು ಪರೀಕ್ಷೆ ಮಾಡ್ತಿರೋ ಹಾಗಿದೆ"

—ಆಫೀಸರು ಸ್ವಾಮಿರಾಯರ ಪಾದಸೇವೆಗೆ ಟೊಂಕ ಕಟ್ಟಿದ್ದ ಈ ಭೀಮಪ್ಪನೇ ಆ ಪ್ರಾಣಿ ಎಂಬ ಸೂಚನೆಯ ನಗು ನಕ್ಕ. ಸ್ವಾಮಿರಾಯರೇ ಅಪ್ಪಣೆ ಕೊಡಿಸಿದರು. ಭೀಮಪ್ಪಾ....ಬಹಳ ದಿನಗಳಿಂದ ನನ್ನ ತಲೆಯಲ್ಲಿನ ಒಂದು ವಿಚಾರ ನಿನಗೆ ಹೇಳಬೇಕೆಂದಿದ್ದೇನೆ.....ನನ್ನ ಆಫೀಸರಗಿರಿಗೆ ನನ್ನ ಅಂತಸ್ತಿಗೆ ನನ್ನ ಒಂದು ಪ್ರೀತಿಯ ಮನೋವೃತ್ತಿಗೆ ತಕ್ಕಂತೆ ನಮ್ಮ ಶೋಭಾಯವಾಗಿ ನಮ್ಮ ಮನೆ ಶೃಂಗರಿಸಿರುವ ಈ ರಾಜೀವಿಯೇ ಸಾಕ್ಷಿ—"

" ಈ ರಾಜೀವಿಗಾಗಿ ಜೀವ ತೆತ್ತುಬಿಡಲೂ ನಾನು ತಯಾರು. ಅವಳ ಒಂದು ಪ್ರೀತಿ ಅವಳ ಒಂದು ನಿಯತ್ತು....ಅವಳ ಒಂದು ನಿಷ್ಠೆ... ನಮ್ಮ ಮನೆಯಾಕೆ ಆಕೆ ಅಂತ ಹೊಗಳ್ತಾ ಇಲ್ಲಿ ಅವಳ ಗುಣ ಅಪರಂಜಿ"

" ಅಲ್ಲವೇ ಅಲ್ಲವೇ....ನಾನು ಕಾಣೆನೇ"

ಅವಳ ಬಾಣಂತನಕ್ಕೆ ನೂರಿಪ್ಪತ್ತು ಆಯಿತು ಅದೂ ಚೀಪು ಎಂದೇ ಹೇಳಬೇಕು....."

" ಆಗತ್ತೆ ಆಗತ್ತೆ "

" ಬರೀ ಆಗತ್ತೆ ಆಗತ್ತೆ ಅಂದ್ರೆ ಆಯ್ತೇ... ಭೀಮಪ್ಪಾ... ಆದರೆ ಆ ಮಕ್ಕಳನ್ನು ಪರದೇಶಿ ಮಾಡಲಾರೆ ..."

" ಅದ್ಯಾಕೆ ಪರದೇಶಿ ಆದಾವು ಸಾರ್. ?

" ನೀವುಗಳು ಸ್ವಾಮಿನಿಷ್ಠೆಯಿಂದ ನನಗೆ ಸಹಾಯ ಮಾಡುತ್ತಿರುವಾಗ ನನಗೆ ಭಯವಿಲ್ಲ .. ಭೀಮು ನೀನೇ ನನಗೆ ಆತ್ಮೀಯ" ನಿನ್ನ ಪ್ರೊಮೋಷನ್ ಪೇಪರುಗಳು ನಿನ್ನೆ ತಾನೆ ಬಂದಿವೆ....ಮುಂದಕ್ಕೆ ಹೋಗತ್ತೆ...."

" ಸ್ವಾಮಿ ಚಿತ್ತ"

"....ನೋಡು ಭೀಮಪ್ಪಾ ಹೀಗಂತೇ ನಿಂತ ಅಲ್ಲಿ... ನಾಯಿಗಿರೋ ನಿಯತ್ತು ಮನುಷ್ಯನಿಗಿಲ್ಲ, "

" ಹೌದು.... ಹೌದು"

" ಆ ನಿಯತ್ತಿನ ಪ್ರಾಣಿ ಮನೆ ಮುಂದೆ ಇರಲೇಬೇಕು... ಭೀಮೂ... ನನ್ನ ಅಸಿಸ್ಟೆಂಟಾದ ನಿನ್ನ ಮನೆಯಲ್ಲಿ ಇವು ಶೋಭಿಸಲೇಬೇಕು... ಬಾ....ಇಲ್ಲಿ ತಾ ಆ ಬುಟ್ಟಿ"

....ಸ್ವಾಮಿರಾಯರು ಕಾಂಪೊಂಡಿನ ಒಂದು ಬದಿಗೆ ಕರೆದೊಯ್ದರು.

"ನೋಡು ಭೀಮು....ರಾಜೀವಿ ಏಳು ಮರಿ ಹಾಕಿದಳು ನಿನಗೆ ತೊಂದ್ರೆ ಕೊಡೊಲ್ಲ.. ನನ್ನ ಪ್ರೀತಿಯ ಇವಳ ಈ ಮಕ್ಕಳು ನನಗೆ ಹೆಚ್ಚಲ್ಲ ಸಾಕಬಲ್ಲೆ ಆದರೆ ನೀನು ನನಗೆ ತಕ್ಕ ಅಸಿಸ್ಟೆಂಟಾಗಲು ಈ ನಾಲ್ಕು ಮರಿ ಈ ಬುಟ್ಟಿಯಲ್ಲಿ ಹಾಕಿಕೊಡುವೆ. ಈ ಬ್ರೀಡು ಮರಿಗೆ ಮುನ್ನೂರು ಕೊಟ್ಟರೂ ಕಡಿಮೆ ರಾಜೀವಿಗೆ ನಾನ್ನೂರು ಕೊಟ್ಟಿದ್ದೆ... ಜಾತಿ ಜಾತಿ ನಾಯಿ."

"ಹೌದು ಹಾದು ನಾಯಿ ಜಾತಿ."

"ಭೀಮೂ ಶ್ರೀರಾಮನವಮಿ ದಿನ ನ್ಯಾಯವಾದ ನಿಯತ್ತಿನ ಬಂಟರಂತಹ ಈ ನಾಲ್ಕು ಮರಿಗಳನ್ನೂ ಈಗಲೇ ತೆಗೆದುಕೊಂಡು ಹೋಗು....ಅದು ಮನೆಗೆ ಭೂಷಣ, ಒಂದು ಗಂಭೀರ, ಮನೆಗೆ ಶೋಭೆ, ದುಡ್ಡು ಮುಖ್ಯವೇ....ನಿಯತ್ತು ನಿಷ್ಠೆಯ ಪ್ರಾಣಿ ಮುಖ್ಯ."

—ಎಂದು ರಾಮನವಮಿಯ ಸಾಮಾನು ತರಲು ಹೊರಟ ನನಗೆ ಸ್ವಾಮಿ ರಾಯರು ಈ ಕುನ್ನಿಗಳನ್ನು ಬುಟ್ಟಿಯಲ್ಲಿ ತುಂಬಿ ಮನೆಗೆ ಅಟ್ಟಿದ್ದರು.

* * * *

"ಹೆದರಬೇಡಾ ಸೀತಾ" — ಎಂದದ್ದು ಅವಳ ಪೂರಾ ಕಥೆ ಕೇಳಿದ ಮೇಲೆ. ಮನೆಯ ಮುಂದಿನ ವರಾಂಡದಲ್ಲಿ ಪುಟ್ಟ ಪುಟ್ಟ ನಾಲ್ಕು ಮುದ್ದು ಮರಿಗಳು ಬಾಲಾ ಆಡಿಸಿ ನಮ್ಮನ್ನು ನೋಡಿದವು.

ಆದರೆ ಒಂದೇ ಚಿಂತೆ ... ನಾಲ್ಕು ಮರಿಯೂ ಹೆಣ್ಣೇ .... ಸ್ವಾಮಿ ಚಿತ್ತ ಮಾಡುವುದೇನು ? ಶ್ರೀರಾಮ ರಕ್ಷೆ .. ಅಷ್ಟೆ.

—ದಾಶರಥಿ ದೀಕ್ಷಿತ್

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್

ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Koravanji, May 1964

Reg. No. B.G. 343 KORAVANJI May 1964

Printed by B. S. Iyengar, Bangalore-2
Publisher—B. N. Gupta Editor—M. Sivaram.